MOTION TO PASS

SRI Y. RAMAKRISHNA.— Sir, I beg to move.

"That the Karnataka Land Revenue (Amendment) Bill 1982 be passed."

MR. DEPUTY SPEAKER.— The question is :

"That the Karnataka Land Revenue (Amendment) Bill 1982 be passed."

The Motion was adopted and the Bill was passed

The Karnataka Contract Carriage (Acuisition) (Amendment) Bill 1981

Motion to Consider

SRI Y. RAMAKRISHNA.—(Hon.Minister for Lsw and Parliamentary Affairs and Veterinary and animal Husbandry).— Sir, I beg to move.

"That the Karnataka Contract Carriages (Acquisition) (Amendment) Bill 1981 be taken into consideration."

The question was proposed

ಶ್ರೀ ವೈ ರಾಮಕೃಷ್ಣ.— ಸನ್ಮಾನ್ಯ ಅಧ್ಯಕ್ಷರೆ, ಈ ೧೯೭೬ರಲ್ಲಿ ಈ ಕಾಂಟ್ರಾಕ್ಟ್ ಕ್ಯಾರೇಜ್ ಕಾನೂನು ಜಾರಿಗೆ ಬಂತು. ಇದು ಜಾರಿಗೆ ಬಂದಾಗಲೇ, ಈ ಕಾನೂನನ್ನು ಜಾರಿಗೆ ತರುವಾಗ ಕೆಲವಾರು ನ್ಯೂನತೆಗಳು ಕಂಡುಬಂದವು. ಆ ನ್ಯೂನತೆಗಳನ್ನು ಸರಿಪಡಿಸುವುದಕ್ಕೋಸ್ಕರ ಈ ತಿದ್ದುಪಡಿಯನ್ನು ಇವತ್ತಿನ ದಿವಸ ಇಲ್ಲಿ ಮಂಡಿಸುತ್ತಾ ಇದ್ದೇನೆ ಮೊದಲನೆಯದಾಗಿ, ನಾಲ್ಕನೇ ಕಾಲಮ್ಮಿನ ಪ್ರಕಾರ ಈ ಒಂದು ಆರ್ಡರನ್ನು ಹೊರಡಿಸಿದ ಕೂಡಲೆ ಎಷ್ಟು ಕ್ಯಾರೇಜ್‌ಗಳು, ಬಸ್‌ಗಳು ನಮ್ಮ ಸರ್ಕಾರಕ್ಕೆ ಸಿಕ್ಕ ಬೇಕಾಗಿತ್ತೋ ಆ ಒಂದು ಆರ್ಡರ್ ಪ್ರಕಾರ ಸಂಪೂರ್ಣವಾದಂಥ ಬಸ್‌ಗಳು ಸಿಕ್ಕಲಿಲ್ಲ. ಆದರೆ ಕಾನೂನಿನ ವ್ಯಾಖ್ಯಾನ ಹೇಗಿದೆಯೆಂದರೆ. ಅಂದಿನಿಂದ ಆಯಾ ಬಸ್‌ಗಳು ಸರ್ಕಾರದ ಸ್ವತ್ತಾಗಿವೆ ಎನ್ನ ತಕ್ಕಂಥ ರೀತಿಯಲ್ಲಿ ಕಾನೂನು ರಚನೆ ಆಯಿತು. ಆದಕ್ಕಾಗಿ ಈ ಒಂದು ತಿದ್ದುಪಡಿ ಮುಖಾಂತರ ಯಾವ ಯಾವ ಬಸ್ಸುಗಳನ್ನು ನಾವು ಸ್ವಾಧೀನ ಪಡಿಸಿಕೊಂಡಿದ್ದೇವೋ ಆ ಸ್ವಾಧೀನಪಡಿಸಿಕೊಂಡಂಥ ಬಸ್ಸುಗಳಿಗೆ ಮಾತ್ರ ಈ ಒಂದು ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ. ಆ ನೋಟೀಫಿಕೇಷನ್‌ನಲ್ಲಿ ಹೇಳಿದಹಾಗೆ, ಎಲ್ಲಾ ಕ್ಯಾರೇಜ್‌ಗಳಿಗೂ ಕೂಡ ಈ ಕಾನೂನು ಅನ್ವಯಿಸುವುದಿಲ್ಲ ಎನ್ನುವುದು ಮೊದಲನೇ ವಿಶ್ಲೇಷಣೆ. ಎರಡನೆಯದು, ೧೦ನೇ ಕಾಲಂನಲ್ಲಿ ಪರಿಹಾರ ಧನ ಏನು ನಾವು ಮಾಲೀಕರಿಗೆ,ಕೊಡಬೇಕಾಗಿದೆಯೋ ಆ ಹಣ ಈಗಿರುವ ಕಾನೂನು ಪ್ರಕಾರ ೧೦ ಸಾವಿರ ರೂಪಾಯಿಗೆ ಕಡಿಮೆ ಇದ್ದ ಪಕ್ಷಕ್ಕೆ ಸಂಪೂರ್ಣವಾಗಿ ಅವರಿಗೆ ಕೊಡಬೇಕು ಎಂದೂ, ೧೦ ಸಾವಿರ ರೂಪಾಯಿಗೆ ಮೇಲ್ಪಟ್ಟಿದ್ದರೆ ಅಂತಹ ಮಾಲೀಕರಿಗೆ ೧೦ ವರ್ಷಗಳಲ್ಲಿ, ಕಂತುಗಳಲ್ಲಿ ಹಣ ಪಾವತಿ ಮಾಡಬೇಕು ಎಂದೂ ನಿಯಮವಿದೆ. ಯಾವ ಬಡ್ಡಿ ದರದಲ್ಲಿ ವರು ಪಾವತಿ ಮಾಡಬೇಕು ಎನ್ನತಕ್ಕಂಥ ನಮೂದನೆ ಇಲ್ಲ. ಆ ನಮೂದನೆಯನ್ನು ನಾವು ಇಲ್ಲಿ ಮಾಡಿದ್ದೇವೆ. ಅದರ ಪ್ರಕಾರ ೬ ಪರ್ಸೆಂಟ್ ಬಡ್ಡಿಯನ್ನು ಸೆಕ್ಯೂರ್ಡ್ ಕ್ರೆಡಿಟರ್ಸ್‌ಗೆ ಕೊಡಬೇಕು ಎಂದು ನಾವು ತೀರ್ಮಾನ ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಈ ಅಮೆಂಡ್‌ಮೆಂಟನ್ನು ನಾವು ತೆಗೆದುಕೊಂಡುಬಂದಿದ್ದೇವೆ. ಅದರ ತತ್ಪರಿಣಾಮವಾಗಿ, ಈಗ ಬಸ್ ಮಾಲೀಕರು ಸೆಕ್ಯೂರ್ಡ್ ಕ್ರೆಡಿಟರಿಂದ ಕಾಂಟ್ರಾಕ್ಟ್‌ಗೆ ಎಂಟರಾಗಿ ಹೆಚ್ಚಿನ ಬಡ್ಡಿ ಕೊಡಲಿಕ್ಕೆ ಅವರು ಅಗ್ರಿಮೆಂಟ್ ಬರೆದಂ ಕೊಟ್ಟಿರುತ್ತಾರೆ. ನಾವು ಗೂಡತಕ್ಕಂಥಾದ್ದು ೬ ಪರ್ಸೆಂಟ್ ಬಡ್ಡಿ ಈ ಹೆಚ್ಚಿನ ಬಡ್ಡಿಯನ್ನು ಬಸ್ ಮಾಲೀಕರಿಂದ ಅವರು ಪಡೆಯಲಿಕ್ಕೆ ಆಗುವುದಿಲ್ಲ ಎನ್ನತಕ್ಕಂಥ ಒಂದು ತಿದ್ದುಪಡಿಯನ್ನೂ ಕೂಡ ಕಾನೂನಿನಲ್ಲಿ ನಾವು ಅಳವಡಿಸಿದ್ದೇವೆ. ಇಷ್ಟು ತಿದ್ದುಪಡಿಗಳನ್ನು ನಾವು ತಂದಿದ್ದೇವೆ. ದಯವಿಟ್ಟು ಇದಕ್ಕೆ ಮಾನ್ಯತೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರಸ್ (ಕೃಷ್ಣರಾಜ).— ಸನ್ಮಾನ್ಯ ಅಧ್ಯಕ್ಷರೆ, ಹಿಂದೆ ಸರ್ಕಾರ ಏಕ್‌ದಂ ಕೆಲವು ಬಸ್ಸುಗಳನ್ನು ವಶಪಡಿಸಿಕೊಂಡಂಥ ಕಾಲದಲ್ಲಿ ಬಹಳ ಜನ ಕಣ್ಣೀರಿಟ್ಟಂಥ ಪ್ರಸಂಗವನ್ನು ನಾವು ನೋಡಿದ್ದೇವೆ. ಆ ಕಾಲದಲ್ಲಿ ನೋಡಿದರೆ ಸರ್ಕಾರವೇ ಹಗಲು ದರೋಡೆ ಮಾಡಿದಹಾಗೆ ಆಯಿತು. ಎಲ್ಲಿ ಬಸ್ಸುಗಳ್ದದ್ದವೊ ಅಲ್ಲಲ್ಲೇ ರಸ್ತೆಗಳಲ್ಲಿದ್ದಾಗ ಅಲ್ಲಲ್ಲೇ ಹಿಡಿದುಕೊಂಡಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಸಂಪಾದನೆ ಮಾಡದೇ ಇದ್ದಂಥ ಬಸ್ಸುಗಳನ್ನು ತೆಗೆದುಕೊಂಡಿದ್ದರೆ ತೊಂದರೆ ಆಗುತ್ತಾ ಇರಲಿಲ್ಲ. ಆದರೆ ಆಗತಾನೇ ಬ್ಯಾಂಕಿನಿಂದ ಸಾಲ ಮಾಡಿ, ಮನೆಯಲ್ಲಿ ಇದ್ದಂಥ ಒಡವೆಗಳನ್ನು ಅಡ ಇಟ್ಟು ತಂದ ಹಣದಿಂದ ಬಸ್ಸುಗಳನ್ನು ಕೊಂಡುಕೊಂಡಂಥ ಸಮಯವಿತ್ತು. ಅವು ಆಗ ತಾನೇ ಬಾಡಿ ನಿರ್ಮಾಣವಾಗಿ ರಸ್ತೆ ಮೇಲೆ ಬಂದ ಒಂದು ವಾರದೊಳಗೆ ' ಬಸ್ಸುಗಳನ್ನು ವಶಪಡಿಸಿಕೊಂಡಿದ್ದರಿಂದ ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಕೆಲವರು ಆತ್ಮಹತ್ಯೆ ಮಾಡಿಕೊಂಡಿರಬಹುದು, ಕೆಲವರು ದಿವಾಳಿಯಾಗಿ ಊರು ಬಿಟ್ಟ ಪ್ರಸಂಗಗಳಿವೆ. ಸರ್ಕಾರ ಬಸ್ಸುಗಳನ್ನು ತೆಗೆದುಕೊಂಡ ಮೇಲೆ ಅದಕ್ಕೆ ಪರಿಹಾರ ಕೊಡುತ್ತೇವೆಂದು ಹೇಳಿದರು. ಪರಿಹಾರ ಕೊಡುವುದರಲ್ಲಿ ನಿರ್ದಿಷ್ಟವಾದಂಥ ನಿಯಮಾವಳಿಯನ್ನು ರಚನೆ ಮಾಡುವುದರಲ್ಲಿ ಸರ್ಕಾರ ಬಹಳ ವರ್ಷಗಳ ಕಾಲ ಮುಂದೂಡಿದ ಕಾರಣ ಅನೇಕ ಜನರು ಅನೇಕ ಸಂಸಾರಗಳು ಬಹಳಷ್ಟು ತೊಂದರೆಗೆ ಒಳಗಾಗಿರುವುದನ್ನು ನಾವು ನೋಡುತ್ತೇವೆ. ಹೀಗಾಗಿ ಅವರಿಗೆ ಕೊಡಬೇಕಾದಂಥ ಪರಿಹಾರವನ್ನು ಸಕಾಲದಲ್ಲಿ ಕೊಡದೇ ಇದ್ದ ಕಾರಣ ಅವರ ಜೀವನವೇ ದುರ್ಭರವಾಗಿರತಕ್ಕ ಪರಿಸ್ಥಿತಿ ಕೂಡ ನಿರ್ಮಾಣವಾಗಿದೆ. ಆದರೆ ಇದರಲ್ಲಿ ಒಂದು ಪ್ರಸಂಗ ಏನೆಂದರೆ, ಬ್ಯಾಂಕಿನಿಂದ ಫೈನಾನ್ಷಿಯರ್ಸ್‌ನಿಂದ ಸಾಲ ಏನು ಕೊಡುತ್ತಿದ್ದರು, ಅದಕ್ಕೆ ಅವರು ಕೊಂಡರೆ ಕೊಂಡಂಥ ಬಸ್ಸಿನ ಆಧಾರ ಒಂದೇ ಅಲ್ಲ ಇತರ ಆಸ್ತಿಗಳನ್ನು ಈಡುಮಾಡಿ ಅದರ ಮೇಲೆ ೧೮ ಪರ್ಸೆಂಟ್ ಬಡ್ಡಿ ಕೊಡುವುದಕ್ಕೆ ಒಪ್ಪಿ ಬಸ್ಸುಗಳನ್ನು ತಂದಂಥ ನಿದರ್ಶನಗಳಿವೆ, ಅವರು ೧೮ ವರ್ಸೆಂಟ್ ಬಡ್ಡಿ ಕೊಡಲು ಒಪ್ಪಿ ಬಸ್ಸನ್ನು ತೆಗೆದುಕೊಂಡು ನೀವು ಆ ಬಸ್ಸನ್ನು ವಶಪಡಿಸಿಕೊಂಡ ನಂತರ ಆ ಬಸ್ಸಿನ ಮಾಲೀಕರು ನೀವಾದ ಮೇಲೆ ವಾಸ್ತವಿಕವಾಗಿ ಜನರಲ್ ಲಾ ಪ್ರಕಾರ ಬಸ್ಸಿನ ಮಾಲೀಕರು ಯಾರಿದ್ದಾರೋ ಅವರು ಆ ಸಾಲದ ಪೂರ್ಣ ಹೊಣೆಯನ್ನು ಹೊರಬೇಕಾಗಿತ್ತು. ಆದರೆ ಆರೀತಿ ಆಗಲಿಲ್ಲ. ಸರ್ಕಾರದವರು ಹಿಂದೆ ೬ ಪರ್ಸೆಂಟ್ ಬಡ್ಡಿ ಕೊಡುತ್ತೇವೆ ಎಂದು ನಿರ್ಧಾರ ತೆಗೆದುಕೊಂಡಿರಿ, ಆದರೆ ೬ ಪರ್ಸೆಂಟ್ ಬಡ್ಡಿಗೆ ಒಪ್ಪಿಕೊಳ್ಳಲು ಬ್ಯಾಂಕ್‌ನವರು ತಯಾರಾಗಿಲ್ಲ, ಇದಕ್ಕೆ ಮಾಲೀಕರೂ ತಯಾರಾಗಲಿಲ್ಲ, ಆದಕಾರಣ ಕೋರ್ಟ್‌ಗಳಿಂತರ ರೂಪಾಯಿಗಳ ಮೊಕದ್ದಮೆಗಳು ಕೋರ್ಟಿನಲ್ಲಿ ನಡೆಯುತ್ತಾ ಇದೆ. ಸಾಮಾನ್ಯವಾಗಿ ಪ್ರತಿಯೊಂದು ಬ್ಯಾಂಕ್‌ಗಳೂ ಹಣ ತೆಗೆದುಕೊಳ್ಳುವುದಕ್ಕೆ ಅವರ ಮೇಲೆ ಮೊಕದ್ದಮೆಗಳನ್ನು ಹೂಡಿದ್ದಾರೆ. ಹಣ ಕೊಡುವುದಕ್ಕೆ ಚೈತನ್ಯವಿಲ್ಲದೇ ಬಸ್ ಸರ್ಕಾರದ ವಶದಲ್ಲಿದೆ, ಈ ಸರ್ಕಾರಿ ಬಸ್ಸನ್ನು ಆಟಾಚ್‌ಮಾಡಿ ಬ್ಯಾಂಕ್‌ನವರು ಬಸ್ಸನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಯಾರಾ ಬಸ್ಸುಗಳನ್ನು ಕಳೆದುಕೊಂಡಿದ್ದಾರೋ ಅವರು ತಮ್ಮ ಆಸ್ತಿಯನ್ನು ಈಡುಮಾಡಿದ್ದರೆ ಆ ಆಸ್ತಿಯನ್ನು ಜಪ್ತಿ ಮಾಡಿಕೊಂಡು ತಮ್ಮ ಹಣವನ್ನು ತೆಗೆದುಕೊಳ್ಳುವುದಕ್ಕೆ ಇವತ್ತು ಕಾರ್ಯಕ್ರಮ ಜರುಗಿದೆ. ಈಗ ಬಸ್ಸುಗಳನ್ನು ತೆಗೆದುಕೊಂಡು ೬ ವರ್ಷಗಳಿಗಿಂತಲೂ ಅಧಿಕವಾಗಿದೆ. ಈ ಬಸ್ಸುಗಳನ್ನು ಏನು ಸರ್ಕಾರದವರು ತೆಗೆದುಕೊಂಡಿದ್ದಾರೆ, ಆ ಬಸ್ಸುಗಳು ಅದರ ಮಾಲೀಕರ ಕೈಯಲ್ಲಿ ಇದ್ದಿದ್ದರೆ ಇವತ್ತೂ ಅದೇ ಬೆಲೆಗೆ ಹೋಗುತ್ತಿದ್ದವು, ಆ ರೀತಿ ಅವರು ಇಟ್ಟುಕೊಳ್ಳುತ್ತಾ ಇದ್ದರು. ೮೦ ಸಾವಿರ ರೂಪಾಯಿ ಬೆಲೆ ಬಾಳುತ್ತಿದ್ದ ಬಸ್ಸು ಸರ್ಕಾರದ ಕೈಗೆ ಸಿಕ್ಕಿದ ೩ ತಿಂಗಳು ಅಥವಾ ೬ ತಿಂಗಳ ಒಳಗೆ ೧೨ ಸಾವಿರ ರೂಪಾಯಿ ಕೂಡ ಬೆಲೆ ಬಾಳಲಾರದಂಥ ಬಸ್ ಆಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ಅವರು ಅಷ್ಟಕ್ಕೆ ಕೊಂಡುಕೊಂಡರೂ ಕೂಡ ಜನಗಳಿಗೆ ಒಳ್ಳೆಯ ಸೌಲಭ್ಯಗಳನ್ನು ಒದಗಿಸುತ್ತಿದ್ದರು, ಬಸ್ ಕ್ಲೀನಾಗಿರುತ್ತಿತ್ತು, ಎಲ್ಲೂ ನಿಲ್ಲದೆ, ಅಪಾಯವಿಲ್ಲದೆ ಹೋಗತಕ್ಕ ಬಸ್‌ಗಳಾಗಿದ್ದವು, ಆ ಬಸ್ಸುಗಳನ್ನು ಸರ್ಕಾರದವರು ತೆಗೆದುಕೊಂಡರು, ಏನಾದರೂ ಉಪಕಾರ ಮಾಡುತ್ತಾರೆ ಎಂದರೆ, ಏಕೆ ಬಸ್ಸುಗಳನ್ನು ತೆಗೆದುಕೊಂಡರು ಅಂದರೆ, ಬಹುಶಃ ಸರ್ಕಾರದಲ್ಲಿ ಸ್ವಲ್ಪ ಆರ್ಥಿಕವಾಗಿ ಮುಗ್ಗರಿಸತಕ್ಕಂಥ ಪರಿಸ್ಥಿತಿ ಇತ್ತು ಎಂದು ಕಾಣುತ್ತದೆ. ಈಗ ಕೆ.ಎಸ್.ಆರ್.ಟಿ.ಸಿ.ಯೊಳಗೆ ಜನಕ್ಕೆ ತೊಂದರೆ ಕೊಡುವುದರ ಜೊತೆಗೆ, ಅನಾನುಕೂಲ ಉಂಟುಮಾಡಿರುವುದರ ಜೊತೆಗೆ ಸರ್ಕಾರ ನಷ್ಟವನ್ನೂ ಕೂಡ ಅನುಭವಿಸುತ್ತಾ ಇದೆ, ಈಗಾಗಲೇ ಸುಮಾರು ೧೫ ಕೋಟಿ ರೂಪಾಯಿ ಮೇಲೆ ನಷ್ಟವನ್ನು ಅನುಭವಿಸಿದೆ ಎಂದು ನಾನು ಕೇಳಿದ್ದೇನೆ. ಈಗಾಗಲೇ ಹೊಸದಾಗಿ ಒಂದು ಕೈಪಿಡಿ ಮಾಡಿಕೊಟ್ಟಿದ್ದಾರೆ. ಅದರಲ್ಲಿ ಜನ ನೋಡಿ ಸಂತೋಷಪಡಬೇಕು. ಪ್ರತಿನಿತ್ಯ ಯಾವುದೇ ಹೆದ್ದಾರಿಯೊಳಗೆ ನೋಡಿದರೂ ದಿನಕ್ಕೆ ಎರಡು ಬಸ್ಸು

ನಿಂತೇ ನಿಂತಿರುತ್ತದೆ. ಆ ಬಸ್ಸನ್ನು ಹತ್ತಿದವರಿಗೆ ನಾವು ಗುರಿಯನ್ನು ಮುಟ್ಟುತ್ತೇವೆ ಎನ್ನುತಕ್ಕಂಥ ಭರವಸೆ ಖಂಡಿತ ಇಲ್ಲ, ಈ ಪರಿಸ್ಥಿತಿಗೆ ಬಸ್ಸುಗಳನ್ನು ತಂದು ನಿಲ್ಲಿಸಿದ್ದಾರೆ, ಮಾಲೀಕ ಎಷ್ಟು ಸೌಕರ್ಯವನ್ನು ಒದಗಿಸುತ್ತಿದ್ದ, ಜನರಿಗೆ ಎಷ್ಟು ಅನುಕೂಲವಾಗುತ್ತಿತ್ತು ಅದನ್ನೆಲ್ಲಾ ಕಿತ್ತುಹಾಕಿದ್ದಾರೆ. ಬಸ್ ಕೊಟ್ಟವನ ವಂಶವನ್ನೇ ನಿರ್ಮೂಲನ ಮಾಡತಕ್ಕ ಕೆಲಸ ಕೂಡ ಸರ್ಕಾರದಲ್ಲಿ ನಡೆದುಹೋಯಿತು. ಯಾರು ಆ ಕೆಲಸ ಮಾಡಿದರೋ ಅವರು ಅದನ್ನು ಅನುಭವಿಸುತ್ತಾರೆಂದು ನನಗನ್ನಿಸುತ್ತಿದೆ. ಅನ್ಯಾಯ ಮಾಡಿದವರಿಗೆ ಒಂದಲ್ಲ ಒಂದು ಕಾಲಕ್ಕೆ ಅದರ ಪ್ರತಿಫಲ ಅದೇ ಆಗುತ್ತದೆ, ಅದನ್ನು ಆ ಜನರು ಅನುಭವಿಸುತ್ತಾರೆ.

ಎಷ್ಟೇ ಜನ ಇವತ್ತು ಕಣ್ಬೇರಿಟ್ಟಿದ್ದಾರೆ. ಮಾರ್ಕೆಟ್ ವಾಲ್ಯುನಲ್ಲಿ ಅವರಿಗೆ ಕಾಂಪನ್ಸೇಷನ್ ಕೊಡತಕ್ಕ ವ್ಯವಸ್ಥೆ ಆಗಬೇಕಾಗಿತ್ತು. ಕ್ಯಾಪನ್‌ಸೇಷನ್ ಯಾರು ಗೊತ್ತು, ಮಾಡುವುದು ? ಡೆಪ್ಯುಟಿ ಕಮಿಷನರ್‌ರವರು, ಮಾನ್ಯ ಶ್ರೀ ಆರ್ಮುಗಂರವರು ಹೇಳುತ್ತಿದ್ದರು. ಹಾಗೇ ಇವತ್ತು ಏನೇ ಕೆಲಸ ಮಾಡಬೇಕಾಗಿದ್ದರೂ ಅದು ಡೆಪ್ಯುಟಿ ಕಮಿಷನರ್‌ಗಳಿಂದಲೇ. ಐಎಎಸ್ ಆಫೀಸರ್‌ಗಳನ್ನು ನೇಮಿಸಿ ಬಿಡುವುದು. ಏನಾದರೂ ಕಾಲರ ಎಪಿಡಮಿಕ್ ಆಗಿತ್ತು ಎಂದರೆ, ಅದಕ್ಕೂ ಡೆಪ್ಯುಟಿ ಕಮಿಷನರ್ ರವರು ನೇಮಕ ಮಾಡಿ ಬಿಡುವುದು. ಬಸ್‌ಗಳನ್ನು ಎಸ್ಟಿಮೇಟ್ ಮಾಡುವುದಕ್ಕೆ ಜಿಲ್ಲಾಧಿಕಾರಿಗಳನ್ನು ನೇಮಿಸಿದ್ದಾರೆ. ಐ.ಎಎಸ್ ಆಫೀಸರ್ಸ್‌ನ್ನು ಬಸ್ಸುಗಳ ಪಾಲ್ಯು ನಿಶ್ಚಯಿಸುವುದಕ್ಕೆ ಅವರು ಎಷ್ಟಾದರೂ ತಜ್ಞರೇ ಎನ್ನುವುದನ್ನು ಕೂಡ ಸರ್ಕಾರದವರ ಗಮನಕ್ಕೆ ಬರಲಿಲ್ಲವೇ ? ಎನ್ನತಕ್ಕದ್ದು ಒಂದು ವಿಷಾದದ ಸಂಗತಿಯಾಗಿದೆ. ಬಸ್‌ಗಳನ್ನು ಎಸ್ಟಿಮೇಟ್ ಮಾಡಿ ವ್ಯಾಲ್ಯು ಕಟ್ಟಬೇಕಾಗಿದ್ದರೆ ಅದಕ್ಕೆ ತಜ್ಞರೇ ಪ್ಯಾಲ್ಯು ಮಾಡಬೇಕಾಗಿರುತ್ತದೆ, ಆದರೆ ಅದಕ್ಕೆ ಸರಿಯಾದ ವ್ಯಾಲ್ಯು ಫಿಕ್ಸ್ ಮಾಡಿದ್ದೀರೋ ಇಲ್ಲವೋ ಎನ್ನುವ ಅನುಮಾನ ಉಂಡಾಗುತ್ತಿದೆ. ಈಗಲೂ ಇದರಲ್ಲಿ ವಾದ ವಿವಾದವಿದೆ, ನಮಗೆ ನ್ಯಾಯವಾದ ಬೆಲೆ ಕೊಡಿ ಲಾಭವೇನೂ ಕೊಡಿ ಎಂದು ಯಾರೂ ಕೇಳುತ್ತಿಲ್ಲ. ಆದರೆ ಇವತ್ತಿನ ದಿವಸ ನೀವು ಕಾಂಪನ್‌ಸೇಷನ್ ಕೊಡುತ್ತಿದ್ದೇವೆಂದು ಹೇಳತ್ತಿದ್ದೀರಿ. ಕೈ ಕಾಲು ಕಿತ್ತು ಹಾಕಿದ್ದರೆ ಅದಕ್ಕೆ ಕಾಂಪನ್‌ಸೇಷನ್ ಕೊಡುವುದೆಂದು ಹೇಳುತ್ತಾರೆ, ಆದರೆ ನೀವು ಅವರ ಬಸ್‌ಗಳನ್ನೇ ತೆಗೆದುಕೊಂಡಿರುವುದರಿಂದ ಅದಕ್ಕೆ ಕಾಂಪನ್‌ಸೇಷನ್ ಅಲ್ಲ ಅದಕ್ಕೆ ಸಂಪೂರ್ಣವಾದ ಪರಿಹಾರವನ್ನು ಕೊಡಿ. ಇನ್ನು ೧೦ ಸಾವಿರಕ್ಕಿಂತ ಕಡಿಮೆ ಇದ್ದರೆ, ಒಂದೇ ಕಂತಿನಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದೀರಿ ಅದಕ್ಕಿಂತ ಜಾಸ್ತಿ ಇದ್ದರೆ ೧೦ ವರ್ಷಗಳ ಸಮಾನ ಕಂತುಗಳಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. ೭೦–೮೦ ಸಾವಿರ ರೂ.ಗಳಿದ್ದರೆ ೧೦ ವರ್ಷಗಳ ಕಾಲವೆಂದರೆ ಬಹಳ ತೊಂದರೆಯಾಗುವುದಿಲ್ಲವೇ ?

ಶ್ರೀ ವೈ. ರಾಮಕೃಷ್ಣ.—ಏಂಟೈರ್ ಅಮೌಂಟ್ ಕೊಡುತ್ತೇವ.

ಶ್ರೀ ಎಚ್. ಗಂಗಾಧರನ್.—ಎಂಟೈರ್ ಅಮೌಂಟ್ ಕೊಟ್ಟರೆ ಸ್ವಾಗತಿಸುತ್ತೇನೆ. ಬಹಳ ದೊಡ್ಡ ಗಂಡಾಂತರ ಇದ್ದುದು ಏನೆಂದರೆ ಬ್ಯಾಂಕ್ ಬಡ್ಡಿಯ ಹೊರತು ಈಗ ಏನು ತಿದ್ದುಪಡಿ ಮುಖಾಂತರ ೬ ಪರ್ಸೆಂಟ್ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಬ್ಯಾಂಕ್‌ನವರು ಒಂದು ಬಡ್ಡಿ ದರವನ್ನು ನಿಗದಿ ಪಡಿಸಿರುತ್ತಾರೆ, ಈಗ ನೀವು ಅದನ್ನು ಬದಲಾವಣೆ ಮಾಡಿದ ಮೇಲೆ ಅವರು ಪುನಃ ತಿದ್ದುಪಡಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ? ನೀವು ಏನೋ ಶಾಸನ ಮಾಡಿ ಬಿಡುತ್ತೀರಿ. ಆದರೆ ರಾಷ್ಟ್ರೀಕೃತವಾದ ಬ್ಯಾಂಕ್‌ಗಳು ಕೇಂದ್ರ ಸರ್ಕಾರದ ಅಧೀನದಲ್ಲಿ ಬರುತ್ತವೆ. ಅವರೂ ಸಹ ದುಡ್ಡು ಕೊಟ್ಟಿರುತ್ತಾರೆ. ಅದಕ್ಕೆ ನೀವು ಈ ರೀತಿಯಾದ ಶಾಸನ ತಂದು ಅವುಗಳ ಮೇಲೆ ಕಂಟ್ರೋಲ್ ತರುವುದಕ್ಕೆ ಬರುತ್ತದೆಯೇ ? ನಿಮ್ಮ ಉದ್ದೇಶವೇನೋ ಒಳ್ಳೆಯದು ಆಗಿತೆ ೬ ಪರ್ಸೆಂಟ್ ಬಡ್ಡಿ ತೆಗೆದು ಕೊಳ್ಳಬೇಕೆಂದು ನಿರ್ಬಂಧವನ್ನು ಹಾಕುವುದಕ್ಕೆ ಸಾಧ್ಯವಾಗುತ್ತದೆಯೇ ? ಆ ದೃಷ್ಟಿಯಿಂದ ನೀವು ಪಾಸ್ ಮಾಡತಕ್ಕ ಕಾನೂನು ಯಶಸ್ವಿಯಾಗಿ ಜಾರಿಗೆ ಬರುತ್ತದೆ ಎನ್ನುವುದರ ಬಗ್ಗೆ ಇನ್ನೊಮ್ಮೆ ಪುನರ್ ಪರಿಶೀಲನೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

SRI C. M. ARUMUGHAM.— Sir. Bank Transaction is governed by the Reserve Bank of India. We cannot pass any legislation.

SRI Y. RAMAKRISHNA.—This House has got powers to pass a legislation. It is a subject coming under item No. 3 of Schedule 2,

SRI C. M. ARUMUGHAM.—Have you examine ?

SRI Y. RAMAKRISHNA.— Yes I have examined twice, thrice.

SRI C.M. ARUMUGHAM. —Mr. Deputy Speaker Sir, can we pass a legislation controlling the transaction of the Banks which is controlled by the Reserve Bank of India?

SRI G.H. GANGADHARAN.—Sir, Reserve Bank of India determine the rate of interest and on that basis only all the Banks will carry their business. Nationalised banks have advanced maney to the bus purchasers. Now, can we pas an enactment restricting the payment of interest. Earlier, the bus purchasers or the bus owners have borrowed money agreeing to pay 18 percent interest and that interest was fixed by the Reserve Bank of India. by this legisiation you can not restrict the rate of interest. This House is not competent to do that.

SBI M. VEERAPPA MOILY.—Sir, the hon. member cannot question the competency of this House. He can only question the question of equity. The interest which we pay it determined by us. It is not regulated by the Reterve Bank, whatever interest the Banks are charging, that is regulated by the Reserve Bank. We are not regulated by the Reserve Bank in charging the interest rate.

SRI J.H. PATEL.—Sir, in the Statement of objec and Reasons it is stated as follows.

> "to restrict the amount of intesest payable to the secured creditors by the operators to the amount of interest payable under the Act".

ಕಾಂಟ್ರಾಕ್ಟ್ ಕ್ಯಾರೇಜಸ್‌ನವರು ಬ್ಯಾಂಕಿನಿಂದ ತೆಗೆದುಕೊಂಡು ಬಂದಿರತಕ್ಕ ಹಣವನ್ನು ವಾಪಸ್ಸು ಕೊಡುವಾಗ ಶೇಕಡ ೬ ರಂತೆ ವಾಪಸ್ಸು ಮಾಡುತ್ತೇವೆ. ಅಷ್ಟೇ ತೆಗೆದುಕೊಳ್ಳಿ ಎಂದು ಕಾನೂನು ಮಾಡುವುದಕ್ಕೆ ಬರುತ್ತದೆಯೇ ? ಹೇಗೆ ? ಎಲ್ಲಿ ಆ ರೀತಿಯಾಗಿ ಕಾನೂನು ಇದೆ.

SRI Y. RAMAKRISHNA.—It is a subject under the Constitution. Item No. 3 in Schedule 2. We have already passed the Karnataka Debt Relief Act.

SRI J.H. PATEL.—Sir, there may be other agencies which are lending money apart from Banks, It may cover those agencies which are carrying on money lending business. But what about the Banks which are governed by a different Act ?

SRI M. VEERAPPA MOILY,—The Banks have to charge the interest at the rate prescribed by the Reserve Bank. As far as the Government is concerned, we are not regulated by the Reserve Bank What I am saying is that we are competent to fix 6 percent interest.

ಶ್ರೀ ಜೆ. ಎಚ್. ಪಟೀಲ್.—ತೆನರಾ ಬ್ಯಾಂಕ್‌ನಿಂದ ನಾನು ಎರಡೂವರೆ ಲಕ್ಷ ರೂ.ಗಗಳನ್ನು ತೆಗೆದುಕೊಳ್ಳುತ್ತೇನೆ. ಆದಕ್ಕೆ ನಿಮ್ಮ ಕಾನೂನಿನಿಂದ ನನಗೆ ಏನೂ ಸಹಾಯವಾಗುವುದಿಲ್ಲವೇ ?

ಶ್ರೀ ವೈ. ರಾಮಕೃಷ್ಣ,—ಇಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ,—ಇದರಲ್ಲಿ ತಾವು ಏನು ಹಾಕಿದ್ದೀರಿ, secured creditors cannot clrim more interest ಎಂದು ಪ್ರಾವಿಜನ್ ಮಾಡಿದ್ದೀರಿ. You can say that they cannot claim more interest from the Government. That power you may have: But are you campetent to say that the Banks have no powers to claim more interest from the operators ? How can you say that ? ಓ ಪರ್ಸೆಂಟೇ ಇಂಟ್ರೆಸ್ಟ್‌ನ್ನು ತೆಗೆದುಕೊಳ್ಳಬೇಕೆಂದು ನೀವು ಬ್ಯಾಂಕ್‌ನವರಿಗೆ ಹೇಳಿದರೆ, ಇದರಲ್ಲಿ ಲಿಗಾಲಿಟಿ ಹೇಗೆ ಬರುತ್ತದೆ ?

SRI RAMANRISHNA.—We are competent enough because it comes within the competency of the Legislature.

SRI M. VEERAPPA MOILY.—Even in respect of sick units that liability is fixed. State Government is competent to determine the the rate of interest. It is under the Acquisition Act. This is also an acquisition Act which is under our own control. We are competent to do that. Therefore, you cannot question the competency of this House. After all. you can question the question of equity and morality.

ಶ್ರೀ ಹೆಚ್. ಗಂಗಾಧರನ್.—ನಮ್ಮ ಅಭಿಪ್ರಾಯ ಏನೆಂದರೆ, ಅವರು ೧೮ ಪರ್ಸೆಂಟ್ ಬಡ್ಡಿ ಕೊಡುತ್ತೇವೆಂದು ಹಣ ತೆಗೆದುಕೋಡಿದ್ದಾರೆ, ಆದರೆ ಈಗ ನೀವು ೬ ಪರ್ಸೆಂಟ್ ಮಾತ್ರ ಕೊಡುವುದೆಂದು ಹೇಳುತ್ತಿದ್ದೀರಿ. ಮಾಲೀಕರಿಂದ ಹಣ ವಸೂಲ್ಮಾಡುವಾಗ ಅವರಿಂದ ಬಡ್ಡಿಯನ್ನು ವಸೂಲ್ಮಾಡಬಾರದೆಂದು ನಿಮ್ಮ ಅಭಿಪ್ರಾಯವೇ ? ರಿಸರ್ವ್ ಬ್ಯಾಂಕಿನಿಂದ ಇಂತಿಷ್ಟು ಬಡ್ಡಿ ಕೊಡಬೇಕೆಂದು ತೀರ್ಮಾನವಾಗಿದ್ದರೆ ರಾಜ್ಯದಲ್ಲಿರತಕ್ಕ ರೈತರಿಗೆ ೪ ಪರ್ಸೆಂಟ್ ದರದಲ್ಲಿ ಸಾಲ ಕೊಡಬೇಕು, ಆದರ ಮೇಲೆ ಬಡ್ಡಿ ಹಾಕಬಾರದೆಂದು ಕಾನೂನು ಮಾಡುವುದಕ್ಕೆ ಬರುತ್ತದೆಯೆ ? ನೀವು ಹೇಗೆ ಮಾಡುತ್ತೀರಿ ? ಹಾಗೇನಾದರೂ ಮಾಡಿದರೆ ರಾಷ್ಟ್ರೀಕೃತ ಬ್ಯಾಂಕುಗಳ ಬಡ್ಡಿದರವನ್ನು ನೀವು ರೆಸ್ಟ್ರಿಕ್ಟ್ ಮಾಡಿದ ಹಾಗೆ ಆಗುತ್ತದೆ. ಆದ್ದರಿಂದ, ಮೊದಲು ನೀವು ಈ ಅಂಶವನ್ನು ಸ್ಪಷ್ಟ ಮಾಡಬೇಕು. You have taken the assets and it must come to you with its liability and also whatever the amount the original owners was to pay to the Bank, you must pay. If you make any law to cut off the debts, we do not come in the way but you should not make that man to suffer.

SRI Y. RAMAKRISHNA.—Having understood your point the intention is abundantly made clear that he need not pay more than 6% of the interest to the creditors.

ಶ್ರೀ ಹೆಚ್. ಗಂಗಾಧರನ್.—ಅದೂ ಇದೆ. ಇಲ್ಲ ಲೀಗಾಲಿಟಿ ಪ್ರಶ್ನೆ ಬಂದಿದೆ. ಆದರಿಂದ ಅನುಕೂಲವಾದರೆ ಒಳ್ಳೆಯದು.

SRI A. LAKSHMISAGAR.—How do you prevant the creditor from executing the liability the operator had with the creditor ? Suppose the creditor had advanced monies to the operator at the rate of 18% under valid documents-document executable, perfectly legal, howdo

you prevant the creditor from recovering the interest at the rate of 18% or anything agreed to between them ? Wht we are saying is, whether under this amending Bill, he is liabile to pay only 6%?

SRI Y. RAMAKRISHNA.—Under this Act, he is protected. He comes within the protection of this Act.

SRI A, LAKSHMISAGAR.—If that is the intention, you must make it clear in the Act itself. It does not specify that. If it is the intention of the Government to protect the interests of the operators whose vehicle has been requisitioned or acquired and that the operator had borrowed money from a Creditor - may be from a Bank or a private individual or a auto-financier in Bangalore, you make it very clear in the Act itself.

SRRI M. VEERAPPA MOILY.—It has been made clear.

SRI A. LAKSHMISAGAR.—It applies also to Creditor.

SRI M. VEERAPPA MOILY.—Secured creditor.

SRI Y. RAMAKRISHNA.—It has been specifically said in the Bill. I will read it out.

> "(4) The amount deducted under Clause (iii) of Sub Section (3) of Section 10 shall be paid in cash in one lumpsum to the secured creditors with interest at the rate of six percent per annum from the date of vesting of the acquired property in the Government to the date of payment and on such payment, the secured creditor shall have no right to claim from the contract carriage operator any more amount by way of interest on such amount."

Ii has been abundantly made clear.

SRI A. LAKSHMISAGAR.—You agree with me. Why don't you add "including a secured creditor"?

SRI M. VEERAPPA MOILY.—Even the Bank cannot make a claim on that. He cannot say, "No, no, you must pay 18%, and all that. This amendment protects the man who has become a victim of requisitioning the contract carriage. He is fully protected by that. This is brought only with a view to help him, otherwise, as the Hon. Leader of the Opposition has said, they will file a suit tomorrow. This would avoid that.

SRI H. GANGADHARAN.—We agree with your intention. You have made it but the question was how far it withstands the test of law. That is to be considered.

SRI M. VEERAPPA MOILY.—That has been done. We have wiped out the debt, which is a more extreme step.

ಶ್ರೀ ಹೆಚ್. ಗಂಗಾಧರನ್:—ಅದು ನೀವು ಕೊಟ್ಟ ಸಾಲ ಅಲ್ಲ , ಅದು ನನ್ನ ಜೇಬಿನಲ್ಲಿದ್ದ ಹಣ. ಅದನ್ನು ವೈಪ್ ಔಟ್ ಮಾಡಿದರೆ ಹೇಗೆ.

Even society loans have not been wiped out. ಬ್ಯಾಂಕಿನವರು ಸಾಲ ಕೊಟ್ಟಿದ್ದನ್ನು ವೈಪ್ ಔಟ್ ಮಾಡಿದ್ದಾರೆಯೇ ಯಾರೋ ಪರದೇಶಿ ಕೊಟ್ಟ ಸಾಲವನ್ನು ವೈಪ್ ಔಟ್ ಮಾಡಿದರೆ ಹೇಗೆ ? ಈಗ ಇರತಕ್ಕ ಸವಂಸ್ಯೆ ಏನೆಂದರೆ "from the date of vesting" ಎಂದು ಹೇಳಿದ್ದೀರಿ. ಯಾವತ್ತು ಸಾಲ ತೆಗೆದುಕೊಳ್ಳುತ್ತಾರೋ ಆವತ್ತಿನಿಂದಲೇ ಬಡ್ಡಿಯನ್ನು ವಸೂಲ್ಮಾಡಬೇಕೆಂಬ ಪದ್ಧತಿ ಇದೆ , ಅದು ಸ್ವಾಗತಾರ್ಹವಾದುದು. ಕೆಲವು ಕಡೆ ಬ್ಯಾಂಕುಗಳಲ್ಲಿ ೧೮ ಪರ್ಸೆಂಟ್ ಬಡ್ಡಿಯನ್ನು ವಸ್ಕೂಡಿದ್ದಾರೆ. ನಿಮ್ಮಿಂದ ಹಣ ಪಾವತಿಯಾಗಿಲ್ಲ ಆದ್ದರಿಂದ ಆ ಹಣ ವಾಪಸ್ಸು ಬರುವುದಕ್ಕೆ ಏನಾದರೂ ಮಾಡುತ್ತೀರಾ ? ಇವತ್ತಿನ ದಿವಸ, ೧೮ ೬ ಪರ್ಸೆಂಟ್ ಬಡ್ಡಿ ಮೇಲೆ ಸಾವಿರಾರ್ರು ಕೇಸುಗಳು ಕೋರ್ಟಿನಿಂದ ಡಿಕ್ರಿ ಆಗಿವೆ. ಆದರ ಬಗ್ಗೆ ಏನು ಹೇಳುತ್ತೀರಿ ? ಈ ರೀತಿ ರಿಕವರಿ ಆಗಿದ್ದರೆ ವಾಪಸ್ಸು ಕೊಡಬೇಕೇ ಆಥವಾ ಏನು ಮಾಡಬೇಕೆಂಬ ಬಗ್ಗೆ ತಿದ್ದುಪಡಿಯನ್ನು ತಂದರೆ ಒಳ್ಳೆಯದು. ಹೆಣ್ಣು ಮಕ್ಕಳ ಒಡವೆ ಪಸ್ತುಗಳನ್ನೆಲ್ಲ ಕೊಟ್ಟು ಹಣ ಕಟ್ಟಿರುತ್ತಾರೆ. ಆದುದರಿಂದ ಅದು ವಾಪಸ್ಸು ಬರಲಿ ಎಂದು ಹೇಳುತ್ತೇನೆ. ಆದರೆ ೬ ಪರ್ಸೆಂಟ್ ಕೊಡಬೇಕಾದುದನ್ನು ಬಿಡಿ ಎಂದು ಹೇಳುವುದಕಾಗುವುದಿಲ್ಲ. ೧೮ ಪರ್ಸೆಂಟ್ ಪೂರಾ ಹಣ ವಸೂಲಾಗಿದ್ದರೆ ಆದರಲ್ಲಿ ೬ ಪರ್ಸೆಂಟನ್ನು ಮಾತ್ರ ಇಟ್ಟುಕೊಂಡು ಉಳಿದ ಹಣವನ್ನು ವಾಪಸ್ಸು ಬರುವಂತೆ ಮಾಡಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ರಾಜ್ಯ ಸರ್ಕಾರದ ಪಟ್ಟಿಯಲ್ಲಿರುವುದು—ಮನಿ ಲೆಂಡಿಂಗ್ ಮತ್ತು ಮನಿ ಲೆಂಡರ್ಸ್ ಹಾಗೂ relief of agricultural indebtedness. ಇದರೆ ಕೇಂದ್ರ ಸರ್ಕಾರದ ಪಟ್ಟಿಯಲ್ಲಿರುವುದು ಬ್ಯಾಂಕಿಂಗ್. ರಿಸರ್ವ ಬ್ಯಾಂಕು, ಬ್ಯಾಂಕಿಂಗ್, ಚೆಕ್ಸ್ ಬಿಲ್ಸ್ ಆಫ್ ಎಕ್ಸ್‌ಛೇಂಜ್, ಇನ್‌ಶ್ಯೂರೆನ್ಸ್, ಇತ್ಯಾದಿಗಳೆಲ್ಲ ಸಂಪೂರ್ಣವಾಗಿ ಕೇಂದ್ರದ ಪಟ್ಟಿಯಲ್ಲಿ ಬರುತ್ತದೆ. ಬ್ಯಾಂಕು ಹೇಗೆ ಹಣ ಕೊಡಬೇಕು ಮತ್ತು ಬಡ್ಡಿ ವಸೂಲ್ಮಾಡಬೇಕೆಂಬ ಬಗ್ಗೆ ಅವರು ಕಾನೂನು ಮಾಡುತ್ತಾರೆ. ಅವರ ಕಾನೂನ್ನು ಮೀರಿ ಹೋಗುವ ಅಧಿಕಾರ ನಮಗೆ ಇದೆಯೆ ? ನಮ್ಮದು ಮನಿ ಲೆಂಡಿಂಗ್ ಮತ್ತು ಮನಿ ಲೆಂಡರ್ಸ್, ಹಾಗೂ ಆಗ್ರಿಕಲ್ಚರಲ್ ಇಂಡೆಟ್‌ಡ್‌ನೆಸ್ ಎಂದು ಇದೆ. ಹಣಕಾಸಿನ ಮಂತ್ರಿಗಳಿಗೆ ಇದರ ಬಗ್ಗೆ ಹೆಚ್ಚಿನ ಮಾಹಿತಿ ಇದೆ ಎಂದು ಭಾವಿಸುತ್ತೇನೆ. ಮನಿ ಲೆಂಡಿಂಗ್ ವ್ಯವಹಾರ ಎಂದರೆ ಚಿಟ್ ಫಂಡಿನಿಂದ, ಮನಿಲೆಂಡರ್ಸ್‌ನಿಂದ ಸಾಲ ತರಬಹುದು. ಇಲ್ಲಿ ನಾವು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ತಂದಿದ್ದೇವೆ. ಅವರು ೧೮ ಪರ್ಸೆಂಟ್ ಬಡ್ಡಿಯ ಮೇರೆಗೆ ಸಾಲ ಕೊಟ್ಟಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ವಿಧಾನ ಸಭೆ ಕಾನೂನು ಪಾಸ್ ಮಾಡಿದೆ . ಆದ್ದರಿಂದ ನಾವು ೬ ಪರ್ಸೆಂಟ್ ಮಾತ್ರ ಬಡ್ಡಿ ಕೊಡುವುದು, ಆದಕ್ಕಿಂತ ಜಾಸ್ತಿ ಕೊಡುವುದು ಕ್ಯಾಗುವುದಿಲ್ಲವೆಂದರೆ ಅವರು ಆ ಬಡ್ಡಿಯನ್ನು ವಸೂಲ್ಮಾಡುವುದಕ್ಕೆ ಆಗದೇ ಇರುವುದಷ್ಟು ರಕ್ಷಣೆಯನ್ನು ಈ ಕಾನೂನು ಕೊಡುತ್ತದೆಯೆ ?

SRI A. LAKSHMISAGAR.—Whether the legislation would bind banks.

SRI VEERAPPA MOILY.—That is under Acquisition Act.

SRI A. LAKSHMISAGAR.—No doubt but the question is where an operator has borrowed money from a nationalised bank at an interest higher higher than 6% – I do not even put it at 18%, how does this piece of legislation bind the Bank ? This is an amending piece of legislation to protect the interests of the operators who have borrowed money from a private auto financier or private money lender, or a

licenced money lender under the Karnataka Money Lenders Act. Suppose a particular operator borrows from a nationalised bank at a particular rata, a rate at which they were competent to charge so far as the borrower is concerned, how does this piece of legislation bind the banking institutions which come and function under a Central legislation and come under Union List ? That is the point.

3—30 P. M.

SRI M. VEERAPA MOILY.—This is a matter with which we are concerned. It may affect the nationalised banks. That is the concern expressed. But, as far as the constitutionality or the legalities are concerned, that has not been questioned even by the concerned authorities. I do not want to go into the details of it. The only question is that the Reserve Bank or the nationalised banks may raise a plea that it will adversely effect them, because they cannot claim more interest. That is one thing which we will look after with the national banks or the Reserve Rank. It is not a question of battle or it is not a legal battle. It is a question of their interest being affected. But, we are doing it in the interest of the operators and in the interest bringing in a social legislation, in the public interest. That is all. It is only the question that has to be considered.

ಶ್ರೀ ಜೆ. ಎಚ್. ಪಟೇಲ್. —ಉದ್ದೇಶ ನೆರವೇರುವುದಕ್ಕೆ ಕಾನೂನು ಸಮರ್ಥವಾಗುತ ದೆಯೇ ? ಬಸ್‌ಗಳನ್ನು ತೆಗೆದುಕೊಂಡಿದ್ದೀರಿ. ಅದಕ್ಕೆ ಕಾಂಪನ್‌ಸೇಷನ್ ಕೊಡುತ್ತೀರಾ ? ಬಸ್‌ಗಳಿಗಾಗಿ ತೆಗೆದುಕೊಂಡು ಬಂದಿರುವ ಸಾಲವನ್ನು.....

SRI M. VEERAPPA MOILY.—ಈಗ ಇರುವ ಪ್ರಶ್ನೆ ಇಷ್ಟೆ.

The Reserve Bank or the nationalised bank or the Ministsy of Finance will say that so much of loss we have incurred in view of the difference of interest'. We will put the statament before the nationalised banks in view of the public interest involved in it.

SRI A. LAKSHMISAGAR.—The attitude of the Government in trying to resolved this is one part of the question. That is good also. It is alright. But, then you are trying to make a law which would restrict the right of the nationalised banks which have entered into a financial transaction with an operator and to collect the entire debt including interest at a rate higher than 6%. Suppose the nationalised banks insist upon the recovery of old dues including the interest of more than 6%. how does this piece of legislation be of any use, is the question, and the answer is 'We will manage with this'. How far Sri Moily would be in a position to manage with the nationalised banks is a different question. But, if Sri Pranab Mukherjee were here and if he makes such an assurance, perhaps I would accept, and not Sri Moily. He may have

some pursuasive value so far, as the plea with the Finance Ministry is concerned. The legality has gone to the Supreme Court, the legality and the validities of it have been upheld. But, the aspect of the matter is not a fact in issue, and this has not been posed either before the High Court or the Supreme Court.

SRI M. VEERAPPA MOILY.—It is a trust which has to be given, the social objectives underlining it.

ಶ್ರೀ ಜಿ. ಎಚ್. ಪಟೇಲ್,—ಬಸ್ ಮಾಲೀಕರಿಗೆ ಯಾವುದೇ ರೀತಿಯಿಂದ ತೊಂದರೆ ಆಗದ ಹಾಗೆ ೬ ಪರ್ಸೆಂಟನ್ನು ಕೊಡುತ್ತೀರಿ. ಬಸ್ಸನ್ನು ನಿಮ್ಮ ವಶಕ್ಕೆ ತೆಗೆದುಕೊಂಡ ನಂತರ ತನಕ ನೀವು ಕೊಡುವುದು ೬ ಪರ್ಸೆಂಟ್. ನೀವು ರಿಸರ್ವ ಬ್ಯಾಂಕ್‌ಗೆ ಕೊಡುವುದು ೬ ಪರ್ಸೆಂಟ್. ಆದಕ್ಕೋಸ್ಕರ ಈ ಕಾನೂನು ಮಾಡಿದ್ದೇವೆಂದು ಹೇಳಿದ್ದೀರಿ ಬಸ್ ಮಾಲಿಕ ಇಲ್ಲಿ ಚಿತ್ರದಲ್ಲಿ ಬರೆದ ಹಾಗೆ ನೀವು ಕಾನೂನು ಮಾಡಿಕೊಳ್ಳಿ ಅವನಿಗೆ ತೊಂದರೆ ಮಾಡುವುದು ಒಳ್ಳೆಯದು.

ಶ್ರೀ ಎಚ್. ಗಂಗಾನರಸ್,—ಸಾಲವನ್ನು ತೆಗೆದುಕೊಂಡಿರುವವನಿಗೆ ಸಾಲದ ಹೊಣೆಯನ್ನು ತಪ್ಪಿಸಿದರೆ ಸಾಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದವರು ಹೇಳಿದ ಮಾತನ್ನು ನಾನು ಕೇಳಿದೆ. ಇದರಲ್ಲಿ ನನ್ನದೊಂದು ಜಿಜ್ಞಾಸೆ ಇದೆ. ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಇದೆ. ಸಾರ್ವಜನಿಕ ಉದ್ದೇಶಕ್ಕಾಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತೇವೆ. ಅವರಿಗೆ ೧೫ ಪರ್ಸೆಂಟ್ ಕೊಡುವುದಿಲ್ಲ. ಅವರಿಗೆ ಕೊಡುವುದು ನಾವು ೬ ಪರ್ಸೆಂಟನ್ನೇ. ಇದು ಸಾರ್ವಜನಿಕ ಉದ್ದೇಶಕ್ಕಾಗಿ, ಲಾಭ ಮಾಡುವುದಕ್ಕೆ ಅಲ್ಲ. ಕಾಂಟ್ರಾಕ್ಟ್ ಕ್ಯಾರೇಜ್ ಆಕ್ಟ್‌ನ್ನು ಮಾಡಿದ್ದೂ ಈ ಉದ್ದೇಶಕ್ಕಾಗಿಯೇ, ಇಲ್ಲಿ ಬಡ್ಡಿಯನ್ನು ಜಾಸ್ತಿ ಕೆಟ್ಟರೆ ಅಲ್ಲೂ ಕೂಡಾ ಬಡ್ಡಿಯನ್ನು ಜಾಸ್ತಿ ಕೊಡಿ ಎಂದು ಕೇಳುತ್ತಾರೆ. ಆದ್ದರಿಂದ ಸಾರ್ವಜನಿಕ ಉದ್ದೇಶಕ್ಕಾಗಿ ನಾವು ಏನೇನ್ನು ಪ್ರಾಪರ್ಟಿಯನ್ನು ಅಕ್ವೈರ್ ಮಾಡುತ್ತೇವೊ ಅವಕ್ಕೆ ಇಷ್ಟೇ ಬಡ್ಡಿಯನ್ನು ಕೊಡುತ್ತೇವೆ.

ಶ್ರೀ ಎಚ್. ಗಂಗಾಧರನ್.—ಇಲ್ಲಿ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಂಡು ಬಸ್‌ಗಳನ್ನು ತೆಗೆದುಕೊಂಡಿದ್ದಾರೆ, ಬ್ಯಾಂಕಿನವರಿಗೆ ಏನು ಹೇಳುತ್ತೀರಿ ? You are taking over liability.

SRI Y. RAMAKRISHNA.—We have protected him under this Act.

ಶ್ರೀ ಎಚ್. ಗಂಗಾಧರನ್.—ಏನೋ ಒಟ್ಟಿನಲ್ಲಿ ಬಸ್ ಮಾಲೀಕನನು ಹಾಳು ಮಾಡಬೇಡಿ.

ಡಾ॥ ಎಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೆ, ಈ ಬಿಲ್ಲನ್ನು ತಂದಿರತಕ್ಕ ಉದ್ದೇಶ ಬಹಳ ಒಳ್ಳೆಯದು. ೩೧ನೇ ಜನವರಿ ೧೯೭೬ರಲ್ಲಿ ಸುಮಾರು ೬೦೦ ಬಸ್‌ಗಳನ್ನು ಸರ್ಕಾರ ತೆಗೆದು ಕೊಂಡಿತು. ಈ ಬಸ್‌ಗಳಲ್ಲಿ ಎಷ್ಟು ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿಯಲ್ಲಿ ಇವೆಯೇ ಗೊತ್ತಿಲ್ಲ. ಈ ಬಸ್‌ಗಳನ್ನು ಕೊಳ್ಳುವಾಗ ಕೆಲಸಕ್ಕೆ ಇಂಜಿನ್ನೇ ಇರಲಿಲ್ಲ, ಕೆಲಸಕ್ಕೆ ಟೈರ್‌ಗಳೇ ಇರಲಿಲ್ಲ. ಇದರಿಂದಾಗಿ ಕೆ.ಎಸ್.ಆರ್.ಟಿ.ಸಿ.ಗೆ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಮಾನ್ಯ ಗಂಗಾಧರನ್ ಅವರು ಹೇಳಿದ ಹಾಗೆ ಎಷ್ಟೋ ಜನ ಮಾಲೀಕರು ಪಾಪ ಬಸ್ ಕೊಂಡ ೮ ದಿನಗಳಲ್ಲಿ ಸರ್ಕಾರ ವಶಪಡಿಸಿಕೊಂಡಿದೆ. ಬಾಡಿ ಬಿಲ್ಡಿಂಗ್ ಆಗುತ್ತಿದ್ದಾಗಲೇ ಕೆಲಸವನ್ನು ವಶಪಡಿಸಿಕೊಳ್ಳಲಾಗಿ ಬಹಳ ಅನ್ಯಾಯ ಕೆಲವರಿಗೆ ಆಗಿದೆ. ಈ ಬಸ್‌ಗಳ ಮೇಲಿನ ಸಾಲದ ಮೇಲಿನ ಬಡ್ಡಿ ಬಗ್ಗೆ ಸರ್ಕಾರ ಆಶ್ವಾಸನೆ ಕೊಟ್ಟಿದೆ. We will pay the interest at an agreed rate between us and the secured creditor. Do not press the case ಎಂದು ಆಶ್ವಾಸನೆ ಕೊಡಲಾಗಿದೆ. ಈ ದಿನ ಮಾಲೀಕರು ಹೆಚ್ಚಿನ ಇಂಟರೆಸ್ಟನ್ನು ಕ್ಲೈಮ್ ಮಾಡಬಾರದೆಂದು ಹೇಳಿ ಬಸ್ ಮಾಲೀಕರಿಗೆ ಸೇಫ್ ಗಾರ್ಡ ಮಾಡಲು ಬಿಲ್ ತಂದಿದ್ದೀರಿ. ಈ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಸರ್ಕಾರದವರು ರೈತರಿಗೆ ಡಿ.ಐ.ಆರ್.ನಲ್ಲಿ ಸಾಲ ಕೊಟ್ಟರು. ಇದನ್ನು ಕೆಲವರಿಗೆ ಟಿ.ಎಲ್.ಹಿ. ಬ್ಯಾಂಕ್ಸ್ ಮುಖಾಂತರ ಕೊಟ್ಟರೆ ಕೆಲವರಿಗೆ ಡಿಸ್ಟ್ರಿಕ್ಟ್ ಬ್ಯಾಂಕ್ ಮೂಲಕ ಅಪೆಕ್ಸ್

ಬ್ಯಾಂಕ್‌ನವರು ಸಾಲ ಒದಗಿಸಿದರು. ಇನ್ನು ಕೆಲವರಿಗೆ ಪೆಡ್ಯೂಲ್ಡ್ ಬ್ಯಾಂಕ್‌ಮೂಲಕ ಕೊಡ ಲಾಯಿತು. ಪೆಡ್ಯೂಲ್ಡ್ ಬ್ಯಾಂಕ್‌ನವರು ಡಿ. ಆರ್. ಇಂಟರೆಸ್ಟನ್ನು ಕ್ಲೈಮ್ ಮಾಡಬೇಡಿ ಎಂದು ಹೇಳಿದಾಗ ಪೆಡ್ಯೂಲ್ಡ್ ಬ್ಯಾಂಕ್‌ನವರು ಒಪ್ಪಲಿಲ್ಲ. ಆಗ ಸರ್ಕಾರ ಡಿಫರೆನ್ಷಿಲ್ ರೇಟ್ ಆಫ್ ಇಂಟರೆಸ್ಟ್ ಕೊಟ್ಟು ಖಾಜಿ ನ್ಯಾಯ ಮಾಡಿ ಸರಿಮಾಡಿಕೊಂಡಿತು.

ಈ ರೀತಿ ಕಾನೂನು ಮಾಡುವುದಕ್ಕೆ ಮುಂಚೆ ಕೇಂದ್ರ ಸರ್ಕಾರ ಮತ್ತು ರಿಸರ್ವ ಬ್ಯಾಂಕ್ ಜೊತೆ ಸಂಧಾನ ಮಾಡುವುದು ಸರ್ಕಾರದ ಜವಾಬ್ದಾರಿಯೆಂದು ನಾನು ತಿಳಿದುಕೊಂಡ್ಡೇನೆ. ಇದನ್ನು ಪ್ರೊಡ್ಯೂಸ್ ಮಾಡಿ ಸಾಧ್ಯವಿದ್ದರೆ ತರಬಹುದಾಗಿತ್ತು ಎಂದು ಕಾಣುತ್ತೆ; ಹಾಗಾಮಾಡಿಲ್ಲ, ಆ ಕಾನೂನು ಇಲಾಖೆಯವರು ಬಹುಶಃ ಸಾಧ್ಯವಿಲ್ಲ ಎಂಬ ಹೇಳಿರಬಹುದು. ಮುಂದೆ ಸರ್ಕಾರದವರು ಈ ರೀತಿ ಮಾಡುವುದಕ್ಕೆ ಹೊರಟರೆ, ಬ್ಯಾಂಕ್ ಇಂಟರೆಸ್ಟ್ ೧೮-೧೯ ಪರ್ಸೆಂಟ್ ಆಗ ನೀವು ೬ ಪರ್ಸೆಂಟ್ ಬಡ್ಡಿಯನ್ನು ಚಾರ್ಜ್ ಮಾಡುತ್ತೇವೆಂದರೆ ಬ್ಯಾಂಕಿನವರು ಬಸ್ಸುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಲವನ್ನು ಕೊಡುತ್ತಾರೆಯೆ ? ರಾಜ್ಯಸರ್ಕಾರದವರಿಗೆ ಕಾನೂನು ಪ್ರಕಾರ ಅಧಿಕಾರವಿದೆ, ಆದರೂ ಇದನ್ನು ವಕೀಲರುಗಳು ಪ್ರಶ್ನೆ ಮಾಡಬಹುದು, ಮುಂದೆ ಕೇಂದ್ರಸರ್ಕಾರದವರು, ಸರ್ವಬ್ಯಾಂಕಿನ ವರು ರಾಷ್ಟ್ರೀಕೃತ ಬ್ಯಾಂಕುಗಳವರು ಪೆಡ್ಯೂಲ್ ಬ್ಯಾಂಕುಗಳವರು ರಿಪ್ಲಿಕ್ಟ್ ಮಾಡಬಹುದು? ಇದರಿಂದ ಜನಗಳಿಗೂ ಕೂಡ ತೊಂದರೆಯಾಗಬಹುದು. ಕಾನೂನನ್ನು ಮಾಡತಕ್ಕಂಥಾದ್ದು ಒಳ್ಳೆಯದು. ೩೦-೬-೮೨ ರಲ್ಲಿ ಸುಮಾರು ೬೦೦ ಬಸ್ಸುಗಳನ್ನು ತೆಗೆದುಕೊಂಡಿದ್ದೀರಿ. ಇವತ್ತು ಬ ಮಾಲೀಕರು ಗಳನ್ನು ಕಾಪಾಡುವ ದೃಷ್ಟಿಯಿಂದ ಮಾಡುತ್ತಿದ್ದೀರಿ. ಸಾಕಷ್ಟು ವ್ಯತ್ಯಾಸ ಇರತಕ್ಕಬಡ್ಡಿಯನ್ನು ಕಾನೂನಿನಲ್ಲಿ ಅಳವಡಿಸುವುದರಿಂದ ಮುಂದೆ ರೈತ ವರ್ಗಕ್ಕೆ ತೊಂದರೆಯಾಗದ ರೀತಿಯಲ್ಲಿ ಮಸೂದೆ ಯನ್ನು ಪಾಸು ಮಾಡುವುದಕ್ಕಿಂತ ಮುಂಚೆ ಕೇಂದ್ರಸರ್ಕಾರದ ಜೊತೆ ಮಾತುಕತೆ ನಡೆಸಲು ಒಳ್ಳೆಯಂ ದೆಂದು ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—೧೯೭೬ ರಲ್ಲಿ ಮಾಡಿರತಕ್ಕಂಥ ಕಾನೂನಿಗೆ ಇವು ಎರಡನೆತಿದ್ದುಪಡಿ ೧೯೭೯ ರಲ್ಲಿ ಒಂದು ತಿದ್ದುಪಡಿ ಮಾಡಿದ್ದೀರಿ. ೧೯೮೨ ರಲ್ಲಿ ಇನ್ನೊಂದು ತಿದ್ದುಪಡಿದ್ದಿದೀರಿ. ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದು ಆಗಾಗ ಪೀಸ್‌ಮೀಲ್ ಆಗಿ ಏತಕ್ಕೆ ತಿದ್ದುಪಡಿ ತರುತ್ತಿ; ಇದ ರಲ್ಲಿ ನಿಮ್ಮ ಉದ್ದೇಶ ಏನು ಎನ್ನುವುದು ನನಗೆ ಅರ್ಥವಾಗಿಲ್ಲ. ೧೯೭೯ ರಲ್ಲಿ, The ment of any amount to an operator shall be subject to the produ n of incometax clearance certificate.

ಈಗ ೬ ಪರ್ಸೆಂಟ್ ಬಡ್ಡಿಯನ್ನು ಕೊಡುತ್ತೇವೆಂದು ತಂದಿದ್ದೀರಿ. ಇದರಲ್ಲಿ ಏನೊಉದ್ದೇಶ ಇರಬೇಕೆಂದು ನಾನು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ನಿಮ್ಮ ದೃಷ್ಟೀನೇ ದುರುದ್ದೇಶದಿಂದ ಕೂಡಿದೆ.

ಶ್ರೀ ಪಿ. ರಾಂದೇವ್.—ಇದು ಕರೆಯುವ ಹಸು ಇದ್ದಹಾಗೆ ಎನ್ನುವುದು ಸ್ಪಷ್ಟವಾಗಿ ಕಾಣ.

ಶ್ರೀ ವೈ. ರಾಮಕೃಷ್ಣ.—ಹದಿನೆಂಟು ಪರ್ಸೆಂಟ್ ಬಡ್ಡಿಯಂತೆ ಎಷ್ಟು ಹಣ ಆಗುತ್ತೆ ? ಎ ಬಸ್ಸುಗಳನ್ನು ಕೊಂಡುಕೊಳ್ಳಬೆಕಾದೆಂಬುದನ್ನು ಹೇಳಿ.

ಶ್ರೀ ಪಿ. ರಾಂದೇವ್.—ಇದೆ ಎಂದು ಅವರು ಹೇಳಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಇಲ್ಲ ಎಂದು ತಾವು ಹೇಳಿ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ಟೇಟ್, ಎಲ್. ಐ. ಸಿ. ಮತ್ತಿತರ ಸಂಸ್ಥೆಗಳಿಂದ ೧೨ ಪರ್ಸೆಂಟ್ ಬಡ್ಡಿ ಪ್ರಕಾರ ಮುನಿಸಿಪಾಲಿಟಿಗೆ, ಕಾರ್ಪೊರೇಷನ್‌ಗಳಿಗೆ, ನೀರು ಸರಬರಾಜು ಮಂಡಲಿಗಳಿಗೆ ಹಣಕೊಡಿಸುತ್ತೀರಿ.

SRI Y. RAMAKRISHNA.—This is only an operation of law... .....

SRI A. LAKSHMISAGAR.—The operation of law and competency to legislate are matters which are well-known. But when a piece o legislation is sought to be adumbrated and sought to be given shap

to it. intentions are also there. You cannot completely rule out the intention behind this amending piece of legislation. This is what Sri Ramdev is trying to say. If he says that there is no intention then there is no intention. Intentions can be either way. He very strongly feels that you come up before this House as often as you can and as frequently as you can, with all kinds of amendments and laws that sometimes it is difficult even for a lawyer to keep pace with these amendments. They are so confusing. if one wants to get at the bottom of the amendment that is sought to be introdused and pasted by this House, it is very difficult to get at the real meaning and real intention behind several piece of amendments that are brought day-in and day-out. That is all the point. You need not be very sensitive about it unless you feel guilty about it.

ಶ್ರೀ ಪಿ. ರಾಮದೇವ್.—೧೯೭೬ ರಲ್ಲಿ ನೀವು ಕಾನೂನು ಮಾಡಿದಾಗ, ೬ ಪರ್ಸೆಂಟ್ ಬಡ್ಡಿ ಎಂದು ಇತ್ತು. ಅದೇ ೧೯೭೯ ರಲ್ಲಿ ಒಂದು ಸಣ್ಣ ತಿದ್ದುಪಡಿ ತಂದಾಗ ಏನು ಹೇಳಿದ್ದೀರಿ.

"in ten equal annual instalments in other cases the amount of each instalments carrying interest at the rate of 6 % per annum"

Shall be subject to production of Income Tax Clearance certificate ಅಂತ ಕೂಡ ಹೇಳಿದ್ದೀರಿ. ೧೯೭೬ ರಲ್ಲಿ ನೀವು ಕಾನೂನುತಂದಾಗ ನಿಮ್ಮ ಉದ್ದೇಶ ಏನಿತ್ತು ಅಂದರೆ,

"Whereas contract carriages are being operated in the State in a manner highly detrimental and prejudicial to public interest;

And Whereas with a view to prevent such misuse and also to provide better facilities for the transport of passengers by road and to give effect to the policy of the State towards securing that the ownership and control of the material resources of the community are so distributed as best to subserve the common good and that the operation of the economic system does not result in the concentration of wealth and means of production to the common detriment"

ಎಂದು ಹೇಳಿದ್ದೀರಿ ?, ಇದು ಏನಾದರೂ ಈಡೇರಿದೆಯೇ ? ಈ ಧ್ಯೇಯೋದ್ದೇಶವು ಈಡೇರಿದೆಯೆ ಕಲಾಸಿ ಪಾಳ್ಯಂನಲ್ಲಿ ಡಿ. ಪಿ. ಶರ್ಮಾರವರ ಎಷ್ಟು ಬಸ್ಸುಗಳು ಇವೆ ? ಎಷ್ಟು ಬಸ್ಸುಗಳಿಗೆ ಲೈಸನ್ಸ್ ಕೊಟ್ಟಿದ್ದೀರಿ ? ಎಷ್ಟು ಬಸ್ಸುಗಳಂ ಓಡುತ್ತಿದ ? ಒಂದೆರಡು ಇಟ್ಟುಕೊಂಡಿದ್ದಂತ ಮಾಲೀಕರಿಂದ ಬಸ್ಸುಗಳನ್ನು ತೆಗೆದುಕೊಂಡಿರಿ ನಿಮಗೆ ಬೇಕಾದ ಸ್ನೇಹಿತರಂ ಹತ್ತಾರು ಬಸ್ಸುಗಳನ್ನು ನಡೆಸುವುದಕ್ಕೆ ಅನಕೂಲ ಮಾಡಿಕೊಟ್ಟಿದ್ದೀರಿ. ಇವತ್ತು ತಾವು ಏನು ಮಸೂದೆ ತಂದಿದ್ದೀರಿ ಇದು ಕೂಡಪೂರ್ತಿಯಾಗಿ ಅನೂರ್ಜಿತವಾಗುತ್ತದೆ. ಸ್ವಾಮಿ, ತಾವು ನನ್ನ ಜೊತೆಯಲ್ಲಿ ಬಂದರೆ ತೋರಿಸುತ್ತೇನೆ. ಪೋಲೀಸ್ ಇಲಾಖೆಯಿಂದ ಹಿಡಿದು. ಆರ್. ಟಿ. ಓ. ಇಲಾಖೆಯ ವರೆಗೆ ಕಾಂಟ್ರಾಕ್ಟ್ ಬಸ್ಸುಗಳ ಮಾಲೀಕರಿಂದ ಹಣದ ಹೊಳೆ ಹರಿಯುತ್ತದೆ. ಇದರಿಂದ ರಸ್ತೆಗಳ ಮೇಲೆ ಸಲೀಸಾಗಿ ಬಸ್ಸುಗಳು ಓಡಾಡುತ್ತಿವೆ, ತಾವು ಯಾವ ಉದ್ದೇಶಕ್ಕಾಗಿ ತರುತ್ತೀರೋ ನನಗೆ ಅರ್ಥವಾಗುತ್ತಿಲ್ಲ. ಇದ

ರಿಂದ ಸಾರ್ವಜನಿಕರಿಗೂ ಸುಖ ಇಲ್ಲ. ಈ ಕಾನೂನು ಬಹುಶಃ ನಿಷ್ಪ್ರಯೋಜಕವಾಗುತ್ತದೆ. ಇಂಥ ಕಾನೂನುಗಳಿಂದ ಒಂದು ಕಡೆ ಭ್ರಷ್ಟಾಚಾರ ಬೆಳೆದಿದೆ ? ಒಂದು ಬಸ್ಸಿಗೆ ಲೈಸೆನ್ಸ್ ತೆಗೆದುಕೊಂಡು ಅದರ ಮರೆಯಲ್ಲಿ ೨೦ ಬಸ್ಸುಗಳನ್ನು ನಡೆಸುತ್ತಾರೆ. ಇದರಿಂದ ಕಷ್ಟ ನಷ್ಟ ಎರಡನ್ನೂ ಅನುಭವಿಸುತ್ತೇವೆ. ಇದನ್ನು ಕಿತ್ತುಹಾಕುವುದು ಒಳ್ಳೆಯದೇನೋ ಅನ್ನಿಸುತ್ತೆ. ನೀವು ಚಾರಿಗೆ ತರುವುದಿಲ್ಲ ಸಂಪೂರ್ಣವಾಗಿ ವಿಫಲಗೊಂಡು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ತಿದ್ದುಪಡಿಕೂಡ ನಿಮಗೆ ಒಂದು ರೀತಿ ಕಾವಲಾಗಿನು ಇದ್ದಹಾಗೆ. ೬೦೦ ಬಸ್ಸುಗಳನ್ನು ತೆಗೆದುಕೊಂಡು ೬ ವರ್ಷಗಳಾಯಿತು. ಗಂಗಾಧರನ್ ಅವರು ಹೇಳಿದ ಹಾಗೆ ಕೆಲವು ಜನ ಮಾಲೀಕರುಗಳು ನೇಣು ಹಾಕಿಕೊಂಡು ಸತ್ತುಹೋಗಿದ್ದಾರೆ. ಅವರಿಗೆ ಇನ್ನೂ ಪರಿಹಾರವನ್ನು ಕೊಟ್ಟಿಲ್ಲ; ಬಡ್ಡಿಯನ್ನು ಕೊಟ್ಟಿಲ್ಲ. ಇದು ನೀವು ಮಾಡಿರತಕ್ಕಂಥ ಸಾಮಾಜಿಕ ನ್ಯಾಯ.

ಬಸ್ ಮಾಲೀಕರಿಗೆ ಪರಿಹಾರ ಕೊಡುವ ವಿಚಾರದಲ್ಲಿ ಆದಷ್ಟು ಬೇಗ ಕ್ರಮ ತೆಗೆದುಕೊಂಡು ಸೆಟಲ್ ಮಾಡಿದ್ದರೆ ಬಹಳ ಚೆನ್ನಾಗಿರುತ್ತಿತ್ತು, ಮನಸ್ಸು ಮಾಡಿದ್ದರೆ ಸರ್ಕಾರಕ್ಕೆ ಅಷ್ಟೇನು ಕಷ್ಟವಾಗುತ್ತಾ ಇರಲಿಲ್ಲ. ೬೦೦ ಬಸ್‌ಗಳಿಗೆ ಎಷ್ಟು ಹಣ ಆಗುತ್ತಿತ್ತು. ೯ ಬಸ್ಸುಗಳಿಲ್ಲಾ ರಸ್ತೆಯ ಮೇಲೆ ಓಡಾಡುತ್ತಿವೆ. ನಾವು ಬಸ್ಸುಗಳನ್ನು ತೆಗೆದುಕೊಂಡಂಥ ಕಾಲದಲ್ಲಿ ಪ್ರತಿಯೊಂದು ಬಸ್ಸುಗಳು ಚೆನ್ನಾಗಿದ್ದವು. ಆದರೆ ನಿಮ್ಮ ಡಿಪೋಗಳಿಗೆ ಯಾವಾಗ ಹೋದಪೋ ಆವಾಗಲೆ ಒಂದೊಂದು ಬಸ್ಸುಗಳಿಗೂ ಒಂದೊಂದು ತರಹ ತೊಂದರೆ ಪ್ರಾರಂಭವಾಯಿತು. ಒಂದಕ್ಕೆ ಇಂಜಿನ್ ಇಲ್ಲ, ಮತ್ತೊಂದಕ್ಕೆ ಬೇರೆ ಪಾರ್ಟ್ ಸರಿಯಿಲ್ಲ. ಈ ರೀತಿ ಆಯಿತು, ನಾವು ಪರಿಹಾರ ಕೊಡತಕ್ಕದ್ದು ಕೂಡಲೇ ಮಾಡಬೇಕಾಗಿತ್ತು. ಅದನ್ನು ಮಾಡಿದ್ದರೆ ಚೆನ್ನಾಗಿತ್ತು.

ಶ್ರೀ ವೈ. ರಾಮಕೃಷ್ಣ.—ನಾನು ಉತ್ತರ ಕೊಡುವಾಗ ಎಲ್ಲವನ್ನೂ ಹೇಳುತ್ತೇನೆ.

ಶ್ರೀ ಪಿ. ರಾಂದೇವ್.—ನಾವು ಅವರನ್ನು ವೆಪನ್ಸ್ ತರಹ ಇಟ್ಟುಕೊಂಡಿದ್ದೀರಿ. ಅವರು ನಿಮ್ಮ ಹತ್ತಿರ ಬಂದು ಕಾಣಬೇಕು. ಯಾವ ಉದ್ದೇಶಕ್ಕೋಸ್ಕರ ಅದು ಮಾಡಿದ್ದೀರಾ ?

SRI A. LAKSHMI SAGAR.—Sir, my learned friend Sri Ramakrishna takes it in a very light sense. I should like to him very straight. These 600 carriages were nationalised with an object that has already been said about by my friend Sri Ramdev. I would like to know how many private carriages are there today in Karnataka ie., after nationalisation of all these 600 carriages and how many of them are operating in Bangalore and what steps you have taken to curb the private operators who are competing with the KSRTC in running the stage carriages from Bangalore to Mysore, Bangalore to Tumkur, Bangalore to Hubli, Bangalore to Belgaum and other neighbouring areas. All those persons are good friends of you. It is a big talk of the city. It is no more a secret. They are all your good friends. I want them to be your good friends but then they should not be under the patronage of the Government. It is all done in a perfectly because the entire State machinery is so tuned to serve the legilised manner interest of the private operators. I am not using very strong language. Please give figures of it.

ಶ್ರೀ ಹೆಚ್. ಗಂಗಾಧರನ್.—ನಾವು ಮೈಸೂರಿನಿಂದ ಬಂದಿರುವುದು, ನೀವು ಬೆಂಗಳೂರಿನವರ ವಿಚಾರ ಅಂಥ ಹೇಳಿದಿರಿ, ಅವರ ಹೆಸರು ಏನು ಅಂಥ ತಿಳಿಸಬೇಕು.

ಶ್ರೀ ಪಿ. ರಂದೇವ್.—ಡಿ. ಪಿ. ಶರ್ಮ, ಅಂಥ ಒಂದು ಇನ್ನೊಂದು ನ್ಯಾಷನಲ್ ಹೈವೇ ಅಂಥ ಈಗಾಗಲೇ ಹೇಳಿದ್ದೀನಿ. ಇವರು ಮಾಡತಕ್ಕ ಭ್ರಷ್ಟಾಚಾರ ಹೇಳತೀರದು. ಇವೊತ್ತು ವೆಲ್ಕ್ ಕಾನ್‌ಸೆಂಟ್ರೇಟ್ ಗಬಾರದು ಎನ್ನುವ ದೃಷ್ಟಿಯಿಂದ ಹೊರಟಿದ್ದೀರಿ, ಇದು ಏನಾಗಿದೆ ಅಂದರೆ ಗಣೇಶನನ್ನು ಮಾಡಲಿಕ್ಕೆ ಹೋಗಿ ಗಣೇಶನ ಅಪ್ಪನ್ನ ಮಾಡಿದ್ದೀರಿ. ಹತ್ತಾರು ಜನರ ಕೈಯಲ್ಲಿ ಇರುವ ಬದಲು ಐದಾರು ಜನರ ಕೈಯಲ್ಲಿ ಇರುವಂತೆ ಮಾಡಿಕೊಂಡಿದ್ದೀರಿ. ತಾವು ಪರಿಹಾರ ಕೊಡಬೇಕಾಗಿರುವಂತಾದ್ದಕ್ಕೆ ಒಂದ ಟೈಮ್ ಲಿಮಿಟ್ ಹಾಕಿ ಅವರಿಗೆ ಕೊಡುವಂಥ ವ್ಯವಸ್ಥೆ ಮಾಡಿ. ಇಲ್ಲಿ ಯಾವ ಯಾವ ರೀತಿ ಕೊಡಬೇಕೆಂದು ಹಾಕಿದ್ದೀರಿ. ತಮ್ಮಲ್ಲಿ ಸಾಮರ್ಥ್ಯ ಇದಯೇ, ತಾಕತ್ತು ಇದೆಯೇ. ತಾವು ಈ ಕಾಂಟ್ರಾಕ್ಟ್ ಕ್ಯಾರೇಜಸ್ ಅಕ್ಟ್ ಅಬಾಲಿಷ್ ಮಾಡಿದ್ದೀರಿ, ಇವೊತ್ತಿನ ದಿವಸ ಹಿಂದ ಎಷ್ಟು ಬಸ್ಸುಗಳು ಓಡುತ್ತಿದ್ದವು ಅದಕ್ಕೆ ಮೂರು ನಾಲ್ಕುರಷ್ಟು ಕಾಂಟ್ರಾಕ್ಟ್ ಕ್ಯಾರೇಜಸ್ ಬಸ್ಸುಗಳು ಓಡುತ್ತಿವೆ. ಸರ್ಕಾರಿ ಬಸ್ಸುಗಳು ಖಾಲಿ ಓಡುತ್ತವೆ, ಇವುಗಳ ಹಿಂದು ಮುಂದಂ ಕ್ಯಾರೇಜಸ್ ಬಸ್ಸುಗಳು ಓಡುತ್ತವೆ. ಏಕೆಂದರೆ ಅವರಿಗೆ ರೂಟ್ ಮತ್ತು ಟೈಮ್ ಹಾಗೆ ಕೊಟ್ಟಿರುತ್ತೀರಿ. ಕಾರಣ ಏನು ಅಂದರೆ ಅವರು ಪ್ಲುರ ಕೈ ಬಿಚ್ಚಿಗೆ ಮಾಡಿರುತ್ತಾರೆ. ತಾವು ಕಾಂಟ್ರಾಕ್ಟ್ ಕ್ಯಾರೇಜಸ್ ಉದ್ದೇಶ ಏನು ಹೇಳಿದ್ದೀರಿ, ಸಮತಾವಾದ, ಎಂಬ ಮಾತನ್ನು ಹೇಳಿ ವೆಲ್ಕ್ ಕಾನ್‌ಸೆಂಟ್ರೇಟ್ ಆಗಬಾರದು ಅಂಥ ಹೇಳಿದ್ದೀರಿಅದನ್ನು ನಿಜವಾಗಿಯೂ ಜಾರಿಗೆ ತರಬೇಕು ಅಂಥ ನಿಮಗೆ ಉದ್ದೇಶ ಇದ್ದರೆ ಈಗ ಓಡುತ್ತಿರುವ ಕಾಂಟ್ರಾಕ್ಟ್ ಕ್ಯಾರೇಜಸ್ ನಿಲ್ಲಿಸಿ.

MR. DEPUTY SPEAKER.—Are you suggesting stop stage of carriages which have All India Permit ?

ಶ್ರೀ ಬಿ, ವಿ ಕಕ್ಕಿಲಾಯ.—ಸನ್ಮಾನ್ಯ ಅಧ್ಯಕ್ಷರೆ, ಹರಿ ಟ್ರಾವಲ್ಸ್ ಅಂಥ ಒಂದು ಬಸ್ಸು ಮುಲ್ಕಿ ಹತ್ತಿರ ಆಕ್ಸಿಡೆಂಟ್ ಆಯಿತು. ಇಂಜಿನಿಯರಿಂಗ್ ಓದುತ್ತಿದ್ದಂಥ ಇಬ್ಬರು ಹುಡುಗರ ಕೈಗಳಿಗೆ ಏಟು ಬಿತ್ತು. ಈ ಬಗ್ಗೆ ಪೋಲೀಸ್ ಸ್ಟೇಷನ್‌ಗೆ ಬರೆದರೆ ಅವರಿಗೆ ಪರ್‌ಮಿಟ್ ಗೊತ್ತಿಲ್ಲ, ಅವರು ಟ್ಯಾಕ್ಸ್ ಕಟ್ಟಿದ್ದಾರೆಯೇ ಇಲ್ಲವೇ ಗೊತ್ತಿಲ್ಲ. ಇನ್‌ಷ್ಯೂರೆನ್ಸ್ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಮಾಲೀಕರ ಅಡ್ರೆಸ್ ಗೊತ್ತಿಲ್ಲ. ಹರಿ ಟ್ರಾವಲ್ಸ್ ಮಾಲೀಕರು ಡೆಲ್ಲಿಯಲ್ಲಿ ಇದ್ದಾರೆಂದು ಹೇಳುತ್ತಾರೆ. ಈ ಘಟನೆ ನಡೆದು ೬ ತಿಂಗಳುಗಳಾಗಿದೆ ಇದುವರೆಗೂ ಅದರ ಬಗ್ಗೆ ಏನು ಆಯಿತು ಎನ್ನುವುದು ಗೊತ್ತಾಗಲಿಲ್ಲ, ಆಕ್ಸಿಡೆಂಟ್ ಆದ ಪ್ರಾರನೆಯ ದಿವಸವೇ ಆ ಬಸ್ಸು ರಾಜ್ಯದಲ್ಲಿಯೇ ಇಲ್ಲ. ಇಲ್ಲಿ ಬೇರೆ ಬಸ್ಸು ತಂದು ಹಾಕಿದ್ದಾರೆ. ಬಸ್ ಆಪರೇಟರ್ಸ್‌ಗೆ ಇಷ್ಟೊಂದು ಸ್ವಾತಂತ್ರ್ಯವನ್ನು ತಾವು ಕೊಟ್ಟಿದ್ದೀರಿ. ಈ ರೀತಿ ತಾವು ತೆಗೆದುಕೊಂಡು ಬಂದು ಸಮತಾವಾದವನ್ನು ಏತಕ್ಕೆ ಬೋಧನೆ ಮಾಡುತ್ತೀರಿ. ಮಾನ್ಯ ಮಂತ್ರಿಗಳು ಈ ಹರಿ ಟ್ರಾವಲ್ಸ್ ಬಗ್ಗೆ ನೋಟ್ ಮಾಡಿಕೊಂಡು ತನಿಖೆ ಮಾಡಿ ನೋಡಿಸಬೇಕು. ಈ ಬಗ್ಗೆ ಆರ್.ಟಿ.ಓ. ಪೋಲೀಸ್, ಡಿವಿಸ್‌ಪಿ, ಎಸ್.ಪಿ., ಡಿ.ಐ.ಜಿ. ಗೆ ಬರೆದರೂ ನಮಗೆ ಸರಿಯಾದ ಉತ್ತರ ಸಿಕ್ಕಿಲ್ಲ. ಹುಡುಗರು ಪರಿಹಾರಕ್ಕಾಗಿ ಕೋರ್ಟ್‌ನಲ್ಲಿ ಕೇಸ್ ಹಾಕಿದ್ದಾರೆ. ಇಬ್ಬರ ಕೈ ಕಟ್ ಆಗಿ ಅಂಪ್ಯುಟೇಟ್ ಆಗಿದೆ. ಒಳಗಡೆ ಸ್ಟೀಲ್ ರಾಡ್ ಹಾಕಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

SRI A. LAKKHMI SAGAR.—You are very correct, Sir. Though this Bill doesn't pertain to matters relating to contract carriages the point started with the intention behind in bringing this piece of legislation. The intention behind this piece of amending legislation is questionable. It is for that reason that hon. Member Sri Ramdev is saying all these things: We are at liberty to bring about all these matters though not directly connected with the amending Bill: But they are matters which are necessary to be brought about. You are aware Sir, that philosophy in taking over these 600 buses was to see that private operators do not exploit the travelling public and to provide better facilities to travelling public. Has this been fulfilled ? This is No. 1,

Secondly, have the private operators been stopped from plying their buses in Bangalore City and in Karnataka ? If so, after the nationalisation of 600 buses there should not be more than 600 private operators. What is the total number in Bangalore City and in Karnataka ?

MR. DEPUTY SPEAKER.—My doubt is, can we stop stage carriages which have All India Permits issued by the Government of India ? The All India Permit has been issued in order to promote tourism in our country.

SRI A. LAKSHMI SAGAR.—I can straightforward tell you Sir, the matter is before the Supreme Court. The KSRTC has filed an application as intervenor and has contended this point at the time of grant of All India Permit. So, the KSRTC must be heard in the matter. Therefore, it is not as if the State Government is completely helpless. Persons who own buses and All India Permits and who have the route of Assam to Meghalaya, ply their buses only in Bangalore City on remunerative routes and they are running buses on the routes which KSRTC run their schedules at lesser rates. All these private operators have foiled the entire transport system in Karnataka and their interest is being safeguarded by the authorities. The result is KSRTC incurring loss over a period of years.

4-00 P.M.

Last year its losses have not been less than Rs. 10 Crores. These are the points which should be taken into consideration because this amending bill has given us an opportunity to place before the Government all these surrounding factors ; not necessarily matters which are directly concerning us.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಸನ್ಮಾನ್ಯ ಸಭಾಪತಿಯವರೆ, ಆಲ್ ಇಂಡಿಯ ಪರ್ಮಿಟ್ ಅಂದರೆ ಅವರಿಗೆ ಒಂದು ಹೊದಿಕೆ ಇದ್ದ ಹಾಗೆ. ಆಲ್ ಇಂಡಿಯಾ ಪರ್ಮಿಟ್ ಇರುವುದು ತಮ್ಮ ಅಧಿಕಾರಿಗಳಿಗೆ ಗೊತ್ತಿರುವುದಿಲ್ಲವೆ ? ಈ ರಾಜ್ಯದಲ್ಲಿ ಅವುಗಳ ರೆಕಾರ್ಡ್ಸ್ ಇರುವುದಿಲ್ಲವೆ ? ಆಲ್ ಇಂಡಿಯಾ ಪರ್ಮಿಟನ್ನು ಹಿಡಿದುಕೊಂಡು ಅಲ್ಲಿ ಬಸ್ಸುಗಳನ್ನು ಓಡಿಸುತ್ತಿರುತ್ತಾರೆ. ಆದರೆ ಅವುಗಳ ರೆಕಾರ್ಡ್ಸ್ ಇರುವುದಿಲ್ಲ. ಸ್ವಾಮಿ, ನಾನು ಆಗಲೇ ಹೇಳಿದಂತೆ ಹರಿ ಟ್ರಾವಲ್ಸ್ ವಿಚಾರವನ್ನು ಮತ್ತೊಮ್ಮೆ ಹೇಳುತ್ತಿದ್ದೇನೆ. ಪಾನ್ಯ ಭಾಸ್ಕರ ಶೆಟ್ಟಿಯವರಿಗೆ ಬಹಳ ಹತ್ತಿರದ ಸ್ನೇಹಿತರೂ, ಕೇರಳದ ಮಾಜಿ ಎಂ.ಎಲ್.ಎ ? ಕುಂಕುಲಾಯ ಎನ್ನುವವರ ಮಗನ ಕೈಗೆ ಫ್ರ್ಯಾಕ್ಚರ್ ಆಯಿತಂ. ಇನ್ನೊಬ್ಬ ಹುಡುಗನಿಗೆ ಆ್ಯಂಪ್ಯುಟೇಷನ್ ಆಯಿತು. ಆ ಇಬ್ಬರು ಹುಡುಗರೂ ಇಂಜಿನಿಯರಿಂಗ್ ಕಲಿಯುತ್ತಿದ್ದವರು. ನಮ್ಮ ಸದನದ ಸದಸ್ಯರಾದ ಪಾನ್ಯ ರೋಡ್ರಿಗ್ಸ್‌ರವರು ಅವರ ಸಂಬಂಧೀಕರು. ಅವರು ಈ ಹುಡುಗರ ಕೇಸನ್ನು ಮಂಗಳೂರು ಕೋರ್ಟ್‌ನಲ್ಲಿ ನಡೆಸುತ್ತಿದ್ದಾರೆ. ಇಂಥ ಕೇಸು ಇದ್ದರೂ ಕೂಡ ನಮ್ಮ ರಾಜ್ಯದವರು ಇದುವರೆಗೂ ಒಂದು ರೆಕಾರ್ಡ್‌ನ್ನೂ ಕೂಡ ಹುಡುಕಿ ತೆಗೆಯಲು ಪೆದಕ್ಕೆ ಸಾಧ್ಯವಾಗಿಲ್ಲ. ಆ ಬಸ್ ಮಾಲೀಕರು ಯಾರು ಎಂಬುದು ಪತ್ತೆ ಆಗಿಲ್ಲ ಈ ಅವರು ನಮ್ಮ ಜನಗಳನ್ನು ಕೊಲ್ಲುತ್ತಿದ್ದಾರೆ. ನಾನು ಪಿತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಆ ಬಸ್ಸುಗಳ ಟೈರ್‌ಗಳನ್ನು ನೋಡುವವರಿಲ್ಲ, ಆಕ್ಸಿಡೆಂಟ್ ಆದರೆ ಕೇಳುವವರಿಲ್ಲ. ಅವುಗಳ ಬಗ್ಗೆ ರೆಕಾರ್ಡ್ಸ್ ಮೈನ್ ಟೈನ್ ಮಾಡುವವರಿಲ್ಲ, ಬ್ರೇಕ್ ಇನ್‌ಸ್ಪೆಕ್ಟರ್ ಆ ವೆಹಿಕಲ್ಸ್‌ನ್ನು ಇನ್‌ಸ್ಪೆಕ್ಟ್ ಮಾಡುವುದಿಲ್ಲ, ಆದರಲ್ಲಿ

ಪರ್ಮಿಟ್ ಇದೆಯೇ ? ಇಲ್ಲವೇ ? ಎಂಬುದನ್ನು ನೋಡುವುದಿಲ್ಲ. ಇನ್‌ಷೂರೆನ್ಸ್ ಕಂಪೆನಿಯಲ್ಲಿ ಹೆಸರು ಬರೆಯುವುದಿಲ್ಲ. ಇನ್‌ಷೂರೆನ್ಸ್ ನಂಬರ್ ಬರೆಯುವುದಿಲ್ಲ. ಇಷ್ಟೊಂದು ಅನಾಹುತಗಳಿಗೆ ಕಾರಣರಾದ ನಿಮ್ಮ ಅಧಿಕಾರಿಗಳಿಗೆ ಏತಕ್ಕೆ ಸಂಬಳ ಕೊಡುತ್ತಿದ್ದೀರಿ. ನಿಮ್ಮ ಅಧಿಕಾರಿಗಳು ಯಾರ ಮೇಲೆ ಸವಾರಿ ಮಾಡುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ ? ಸ್ವಾಮಿ ತಮಗೆ ನಾನು ಈಗ ಏನೊಂದು ಕೇಸನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ, ಇದನ್ನು ತಾವು ಎನ್‌ಕ್ವೈರಿ ಮಾಡಿಸಿ ನಮಗೆ ಹೇಳಬೇಕು.

ಶ್ರೀ ಪಿ ರಾಮದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ, ಈ ಆಕ್ಟ್‌ನಲ್ಲಿ ತಾವು ನೋಟಿಫೈ ಮಾಡಿದ ೧೫ ದಿವಸದಲ್ಲಿ ಕ್ಲೈಮ್‌ಸ್‌ನ್ನು ಸಬ್ಮಿಟ್ ಮಾಡಬೇಕೆಂದಿದೆ. ಪಾರ್ಟಿ ಎಲ್ಲಿ ಅಗ್ರಿಮೆಂಟ್‌ಗೆ ಬರುತ್ತಾನೆ ಅಲ್ಲಿ ಸೆಟ್ಲ್‌ಮೆಂಟ್ ಆಗುತ್ತದೆ. ಎಲ್ಲಿ ಪಾರ್ಟಿ ಅಗ್ರಿಮೆಂಟ್‌ಗೆ ಬರುವುದಿಲ್ಲ ಅಂಥ ಕಡೆ ಒಬ್ಬ ಆರ್ಬಿಟ್ರೇಟರ್‌ನ್ನು ಅಪಾಯಿಂಟ್‌ಮೆಂಟ್ ಮಾಡಬೇಕೆಂದಿದೆ. ಅದನ್ನ ೬೦ ದಿವಸದಲ್ಲಿ ತೀರ್ಮಾನ ಮಾಡಬೇಕೆಂದು ಕಾನೂನಿನಲ್ಲಿ ಇದೆ. ಆದರೆ ತಾವು ೬ ವರ್ಷ ಏತಕ್ಕೆ ತೆಗೆದುಕೊಂಡಿರಿ ಸ್ವಾಮಿ ? ಈ ೬ ವರ್ಷದ ಅವಧಿಯಲ್ಲಿ ಅವರು ಎಷ್ಟು ಚಿತ್ರ ಹಿಂಸೆಗೆ ಗುರಿಯಾಗಿದ್ದೇವೆ ಎಂಬುದಂ ತಮಗೆ ಗೊತ್ತಿದೆಯೆ ? ತಮ್ಮ ಅಧಿಕಾರಿಗಳೇನೋ ಆರಾಮವಾಗಿ ಇರುತ್ತಾರೆ. ಏಕೆಂದರೆ ನಿಮ್ಮ ಅಧಿಕಾರಿಗಳದ್ದು ಏನು ಹೋಗುತ್ತದೆ. ಹೋಗುವುದು ಬೇರೆ ಯಾರದ್ದೋ ಹೋಗುತ್ತದೆ. ಪಾರ್ಟಿ ಆ ಬಸ್ಸನ್ನು ಬ್ಯಾಂಕ್‌ನಿಂದಲೋ, ಅಥವಾ ಮಾರ್ವಾಡಿಯಿಂದಲೋ ಸಾಲಸೋಲ ಮಾಡಿ ತಂದು ಹಾಕಿರುತ್ತಾನೆ. ಅಂಥವರು ಈ ಸಂದರ್ಭದಲ್ಲಿ ನೆಲ ಕಚ್ಚುವುದಿಲ್ಲವೆ ? ಈ ಕಾನೂನನ್ನು ಜಾರಿಗೆ ತಂದ ಮೇಲೆ ಅದನ್ನು ಎಷ್ಟು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಿದ್ದೀರಿ ಎಂಬುದನ್ನು ಹೇಳು ಶ್ರೀರಾ ? ಈಗ ನಾವು ೬ ಪರ್ಸೆಂಟ್ ಬಡ್ಡಿ ಸೇರಿಸಿ ಹಣವನ್ನು ಪಾವತಿ ಮಾಡುತ್ತೇವೆಂದು ಹೇಳು ತ್ತಿದ್ದೀರಿ. ಆದರೆ ಈ ಹಿಂದೆಯೇ ಈ ಕಾನೂನು ಇತ್ತು.

ಸ್ವಾಮಿ, ನಾನು ತಮ್ಮನ್ನು ಕೇಳುತ್ತಿರುವುದೇನೆಂದರೆ, ತಾವು ಏನೊಂದು ಉತ್ತಮ ಉದ್ದೇಶ ದಿಂದ ಈ ಕಾನೂನನ್ನು ತಂದು ಪಾಸಗೀ ಜನರ ಕೈಯಲ್ಲಿ ಇಂಥಾದ್ದು ಇರಬಾರದೆಂದು ಮಾಡಿಕೊಂಡಿ ದ್ದೀರಿ ಇದು ಸಂಪೂರ್ಣವಾಗಿ ವಿಫಲವಾಗುವುದಿಲ್ಲವೆ ? ನನ್ನ ಮಟ್ಟಿಗೆ ಹೇಳುವುದಾದರೆ ಬಹುಶಃ ತಾವೇ ಇದಕ್ಕೆಲ್ಲಾ ಕಾರಣರು. ಇದರ ಸಂಪನ್ಮೂಲ ತಮಗೆ ಚೆನ್ನಾಗಿ ಗೊತ್ತಿದೆ. ಚುನಾವಣೆ ಹಾಗೂ ಇತರೇ ಸಂದರ್ಭಗಳಲ್ಲಿ ಇದು ಏನು ಬೇಕಾದರೂ ಕೊಡುವಂಥ ಕಾಮಧೇನು ಆಗಿದೆ. ಆದ್ದರಿಂದಲೇ ಇಂಥ ಒಂದು ಉದ್ದೇಶವನ್ನು ಹಾಳು ಮಾಡುವ ಕೆಲಸವನ್ನು ತಾವು ಸರ್ಕಾರದ ಮಂತ್ರಾಂತರ ಮಾಡಿ ದ್ದೀರಿ. ಇದು ಸರಿಯಲ್ಲ. ಇದಕ್ಕೆ ತಾವು ಒಂದು ಕಾಲವನ್ನು ನಿಗದಿಗೊಳಿಸಿ ಅಷ್ಟರಲ್ಲಿ ಇದನ್ನು ಮುಂಕ್ತಾಯ ಮಾಡಬೇಕೆಂದು ಹೇಳಬಯಸುತ್ತೇನೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ವೈ. ರಾಮಕೃಷ್ಣ (ಮಾನ್ಯ ಕಾನೂನು ಖಾತೆ ಸಚಿವರು).—ಸನ್ಮಾನ್ಯ ಸಭಾಧ್ಯಕ್ಷರೆ, ಇದು ವರೆಗೂ ಮಾನ್ಯ ಸದಸ್ಯರುಗಳು ಕೊಟ್ಟಿಂಥ ಸಲಹೆಗಳನ್ನು ಸರ್ಕಾರ ಸ್ವೀಕರಿಸಿ ಇವುಗಳನ್ನು ಎಷ್ಟು ಪಟ್ಟಿಗೆ ಅಸಾಮಾನಕ್ಕೆ ತರಬೇಕೋ ಅಷ್ಟು ಮಟ್ಟಿಗೆ ತರುತ್ತದೆ. ಅದಕ್ಕಿಂತ ಮುಂಚಿತವಾಗಿ ಮಾನ್ಯ ಸದಸ್ಯರಾದ ರಾಮದೇವ್‌ರವರು ಕೆಲವು ವಿವರಗಳನ್ನು ಕೇಳಿ ಏತಕ್ಕೆ ಇಷ್ಟು ತಡವಾಯಿತು ? ಎಂಬು ದಾಗಿಯೂ ಪ್ರಶ್ನೆ ಮಾಡಿದ್ದಾರೆ. ಆದ್ದರಿಂದ ನಾನು ಮಾನ್ಯ ಸಭೆಯ ಗಮನಕ್ಕೆ ಈ ಒಂದು ವಿಷಯ ವನ್ನು ತರಬಯಸುತ್ತೇನೆ,

Number of vehicles notified for acquisition 785.

Number of vehicles omitted from acquisition by notification 19, since they were no road worthy.

Number of vehicles returned to the owners as per the High Court decision–6.

Number of vehicles not acquired due to non–availability in the State–157.

Still process is going on in serch of them.

Actually number of vehicles acquired and handedover is 603.

ಶ್ರೀ ಪಿ. ರಾಮದೇವ್.—ಅವರಿಗೆ ಇನ್ನೂ ಹಣವನ್ನೇ ಕೊಟ್ಟಿಲ್ಲವಲ್ಲಾ ?

ಶ್ರೀ ವೈ. ರಾಮಕೃಷ್ಣ.—ನಾವು ಏತಕ್ಕೆ ಈ ಅಮೆಂಡ್‌ಮೆಂಟ್‌ನ್ನು ತಂದಿದ್ದೇವೆ ಎಂದರೆ, ನಾವು ನೋಟಿಫಿಕೇಷನ್ ಮಾಡಿದ್ದೇವೆಂದು ಕಾಂಪನ್‌ಸೇಷನ್ ಕ್ಲೈಂ ಮಾಡಬಾರದು. ಯಾವ ವೆಹಿಕಲ್ಸ್‌ನ್ನು ಫಿಸಿಕಲ್ ಪೊಸಿಷನ್‌ಗೆ ತೆಗೆದುಕೊಂಡಿದ್ದೇವೆ ಅದಕ್ಕೆ ಮಾತ್ರ ಕಾಂಪನ್‌ಸೇಷನ್ ಕೊಡಬೇಕೆಂದು ಇದನ್ನು ತಂದಿದ್ದೇವೆ.

ಇನ್ನು Number of cases in which compensation has been determined by the authorised Officers – 464 out of 603. Lumbsum interest with 6% ಕೊಡುವುದಕ್ಕೆ ಇವತ್ತು ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ.

ಶ್ರೀ ಪಿ. ರಾಮದೇವ್.—ಇದನ್ನು ತಂದಿರುವ ಉದ್ದೇಶವಾದರೂ ಏನು ?

ಶ್ರೀ ವೈ. ರಾಮಕೃಷ್ಣ.—ಪೂರ್ತಿ ಹಣವನ್ನೂ ೬ ಪರ್ಸೆಂಟ್ ಇಂಟರೆಸ್ಟ್‌ನೊಂದಿಗೆ ಅವರಿಗೆ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಈ ತಿದ್ದುಪಡಿಯನ್ನು ಇಲ್ಲಿ ತಂದಿದ್ದೇವೆ.

ಇನ್ನು Number of cases pending with Arbitrators, 97.

Number of cases pending in the High Court–71.

Total compensation paid upto 31-3-1981 Rs. 2,01,85,984

Amount of compensation paid during 81-82 Rs. 77,15,290.

SRI A. LAKSHMI SAGAR.—What is the estimatted total liability ?

ಶ್ರೀ ವೈ. ರಾಮಕೃಷ್ಣ.—ಅದೆಲ್ಲಾ ಆದಮೇಲೆ ನಾನು ಹೇಳುತ್ತೇನೆ. ಈ ಎಲ್ಲಾ ಅರ್ಧಂಬರ್ಧ ಆಗಿರುವುದರಿಂದ ಒಟ್ಟು ಎಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಕೋರ್ಟ್‌ನಲ್ಲಿ ಕೂಡ ಕೆಲವು ಕೇಸುಗಳಿವೆ. ಆದ್ದರಿಂದ ಅವು ಬಂದಬಂದಂತೆ ನಾವು ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. We cannot arrive at that figure. ಬಂದಬಂದಂತೆ ನಾವು ಕೊಡುವುದಕ್ಕೆ ಸಿದ್ಧವಾಗಿದ್ದೇವೆ. ಇನ್ನು ಉಳಿದಿರತಕ್ಕ ಬಸ್ಸುಗಳಿಗೂ ಏತಕ್ಕೆ ಕೊಟ್ಟಿಲ್ಲವೆಂದು ತಾವು ಕೇಳಬಹುದು, ಮಾನ್ಯ ಸದಸ್ಯರು ಹೇಳಿದಂತೆ ಆ ಬಸ್ಸುಗಳಿಗೆ ಆರ್. ಸಿ. ಬುಕ್ಕ, ಪರ್ಮಿಟ್, ಇನ್ನೂ ಮುಂತಾದ ಸರಿಯಾದ ದಾಖಲಾತಿಗಳು ಸಿಕ್ಕದೇ ಇರುವುದರಿಂದ ನಾವು ಅವರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—೬೦೩ ಬಸ್‌ಗಳ ಪೈಕಿ ಎಷ್ಟು ಬಸ್ಸುಗಳು ಉಪಯೋಗಕ್ಕೆ ಬಂದಿವೆ.

ಶ್ರೀ ವೈ. ರಾಮಕೃಷ್ಣ.—೬೦೩ ಬಸ್‌ಗಳ ಪೈಕಿ ೮೪ ಮಾತ್ರ ಉಪಯೋಗಕ್ಕೆ ಬಂದಿದೆ. Number of vehicles kept after acquisition only 84. and the rest are in use. ನಾವು ಕೋಟ್ಯಾಂತರ ರೂಪಾಯಿ ಪರಿಹಾರವನ್ನು ಕೊಟ್ಟಿದ್ದೇವೆ. ಅಂದರೆ ಸುಮಾರು ೨.೮೦ ಕೋಟಿ ರೂ. ಇನ್ನು ಉಳಿದಿರತಕ್ಕ ಹಣವನ್ನು ಯಾವರೀತಿ ಕೊಡಬೇಕು ? ಯಾವ ಬಡ್ಡಿ ದರದ ಮೇಲೆ ಕೊಡಬೇಕು ? ಎಂಬುದನ್ನು ನೋಡುತ್ತಿದ್ದೇವೆ. ಸರ್ಕಾರಕ್ಕೆ ಬಡ್ಡಿ ಉಳಿಯುವುದಾದರೆ ೧೦ ವರ್ಷದ್ದನ್ನೂ ಒಂದೇ ಸಾರಿ ಏತಕ್ಕೆ ಕೊಡಬಾರದೆಂಬುದನ್ನೂ ಯೋಚನೆ ಮಾಡುತ್ತಿದ್ದೇವೆ. ಆದ್ದರಿಂದಲೇ ನಾವು ಈ ತಿದ್ದುಪಡಿಯನ್ನು ತಂದಿರುವುದು.

ಮಾನ್ಯ ಸದಸ್ಯರು ಮತ್ತೊಂದು ಪ್ರಶ್ನೆಯನ್ನು ಎನು ಕೇಳಿದರೆಂದರೆ, ಈಗ ಬಹಳಷ್ಟು ಖಾಸಗೀ ಬಸ್ಸುಗಳು ಓಡಾಡುತ್ತಿದ್ದರೂ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿದೆಯೆ ? ಎಂದು ನಾನಾದರೂ ಹೇಳುತ್ತೇನೆ. ಈ ಕಾನೂನು ಜಾರಿಗೆ ಬಂದಮೇಲೆ ನಾವು ಒಂದೇ ಒಂದು ಪರ್ಮಿಟನ್ನೂ ಕೂಡ ಕೊಟ್ಟಿಲ್ಲ : ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಶ್ರೀ ಪಿ. ರಾಂದೇವ್.—ನಿವ್ಮ್ಗೆ ಪರ್ಮಿಟ್ ಅವರಿಗೆ ಬೇಕೇ ಆಗಿಲ್ಲ.

ಶ್ರೀ ವೈ ರಾಮಕೃಷ್ಣ.—ಆಲ್ ಇಂಡಿಯಾದವರು ಆಲ್ ಇಂಡಿಯಾ ಪರ್ಮಿಟನ್ನು ಕೊಟ್ಟಿದ್ದಾರೆ. ಇದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಈ ಆಕ್ವಿಸಿಷನ್ ಆಫ್ ಪ್ರೈವೇಟ್ ಕಾರೇಜಸ್ ಆಕ್ಟ್ ಬಂದಮೇಲೆ ನಾನೇನಾದರೂ ಪರ್ಮಿಟ್ ಕೊಟ್ಟಿದ್ದರೆ ಅದನ್ನು ತಾವು ಪ್ರಶ್ನೆ ಮಾಡಬಹುದು. ಆದರೆ ಮೊನ್ನೆ ದಿವಸ ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ೫೨ ಪರ್ಮಿಟ್‌ಗಳನ್ನು ಮಾತ್ರ ಕೊಟ್ಟಿದ್ದೇವೆ ಅಷ್ಟೇ.

ಮಾನ್ಯ ಅಧ್ಯಕ್ಷರೇ ಶ್ರೀಮಾನ್ ಕಕ್ಕಿಲಾಯರವರು ಹರಿಟ್ರೇಡರ್ಸ್ ಬಗ್ಗೆ ವಿಚಾರ ಹೇಳಿದ್ದಾರೆ. ಸಂಬಂಧಪಟ್ಟವರಿಗೆ ತಿಳಿಸಿದ್ದೇನೆ. ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರವಾಗಿ ಈ ಮಸೂದೆಯನ್ನು ತಂದಿರತಕ್ಕಂಥ ಉದ್ದೇಶ ಚೆನ್ನಾಗಿದೆ. ಹಣ ಕೊಡಬೇಕೆಂಬುದರ ಬಗ್ಗೆ ಕಾತುರತೆ ಇದೆ. ಅವರಿಗೆ ಪ್ರೊಟೆಕ್ಷನ್ ಕೊಡಬೇಕು ಎನ್ನುವ ಸದುದ್ದೇಶದಿಂದಲೇ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ, ದಯವಿಟ್ಟು ಮಾನ್ಯ ಸಭೆ ಅನುಮೋದನೆಯನ್ನು ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಡಿಫರೆನ್ಷಿಯಲ್ ರೇಟ್ ಆಫ್ ಇಂಟರೆಸ್ಟ್‌ಗೆ ರೈತರಿಗೆ ಕೊಡುತ್ತೀರಾ ಎಂದು ಕೇಳುತ್ತೇನೆ.

ಅಧ್ಯಕ್ಷರು.—ಕೊಟ್ಟಿದ್ದಾರೆ. ಒಟ್ಟು ೬ ಪರ್ಸೆಂಟ್ ಡಿಫರೆನ್ಸ್ ಇದೆ ಎಂದು ಹೇಳಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಇದು ಜನರಲ್ ಕ್ವಶ್ಚನ್, ಅಮೆಂಡ್‌ಮೆಂಟಿಗೂ ಇದಕ್ಕೂ ಸಂಬಂಧವಿಲ್ಲ ಅಗ್ರಿಕಲ್ಚರ್ ಡಿಮ್ಯಾಂಡ್ ಬಂದಾಗ ಇದನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್. ಗಂಗಾಧರನ್.—೧೮ ಪರ್ಸೆಂಟ್ ಪ್ರಕಾರ.

ಶ್ರೀ ವೈ. ರಾಮಕೃಷ್ಣ —ಬಂದಾಗ ಹೇಳುತ್ತೀನೆ.

MR. SPEAKER.—The question is :

"That the Karnataka Contract Carriages (Acquisition) (Amendment) Bill, 1981, be taken into consideration."

The Motion was adopted

CLAUSE—2

MR. SPEAKER.—Now, we shall take up Clauses. Clause-2 there is an amendment. The Minister may please move the amendment.

SRI Y. RAMKRISHNA.—Sir, on behalf of the Minister for Transport and Minor Irrigation, I beg to move ;

> "That in sub-clause (2), for the words "shall be inserted" the words "shall be and shall be deemed always to have been inserted" shall be substituted."

The question was proposed

MR. SPEAKER.—The question is :

> "That in sub-clause (2), for the words "shall be inserted" the words "shall be and shall be deemed always to have been inserted" shall be substituted."

The Motion was adopted